KARNATAKA PRIVATE NURSING HOMES (REGULATION) BILL, 1976

(Governer's Recommendation.)

MR. DEPUTY SPEAKER.—I have received a recommendation from the Governor for consideration of the Karnataka Private Nursing Homes (Regulation) Bill, 1976.

Motion to Consider

SRI. H. M. CHANNABASAPPA (Minister for Health).—I beg to move-

"That the Karnataka Private Nursing Homes (Regulation Bill), 1976, be taken into consideration."

MR. DEPUTY SPEAKER.—Motion moved.

"That the Karnataka Private Nursing Homes (Regulation) Bill, 1976, be taken into consideration."

MR. DEPUTY SPEAKER.—Mr. Shamanna has got a motion. He may also move it.

SRI. T. R. SHAMANNA.—I move.

"That Karnataka Private Nursing Homes Ordinance be disapproved as it is irrational and unhelpful to the public."

MR. DEPUTY SPEAKER.—Motion moved.

"That Karnataka Private Nursing Homes Ordinance be disapproved as it is irrational and unhelpful to the public."

SRI. H. M CHANNABASAPPA.—My submission is that the motion moved by Sri Shamanna is not in order since we have got the Bill to replace the Ordinance. The Bill is under discussion, but not the Ordinance. When it is not in order how can it be allowed to be moved.

MR. DEPUTY SPEAKER.—Under Rule 22 of the Rules of Procedure, he has given notice. It is quite correct under this rule.

4-00 P.M.

SRI H. M. CHANNABASAPPA.—Mr. Deputy Speaker, Sir, we are heaving several private Nursing Homes in the State Many of them have no adequate staff, and even the staff that they have including paramedical are not sufficiently qualified or trained. In regard to the equipment also there is a lot of short-fall. Many of them are run in unhygienic conditions and lack of adequate facilities. There have been charges agaist Private Nursing Homes that their charges for curing

diseases and surgical operations are exorbitant and also there is an amount of exploitation of the ordinary people The quality of service is also said to be of low standard.

In order to over come all these things, the Government has been considering the question of regulating and controlling these Private Nursing Homes, and having considered the urgent need we have promulgated an Ordinance setting out standards for mainteenance of these Private Nursing Homes, and this Bill is now intended to replace the Ordinances, The provisions here are very simple. Private Nursing Homes, include hospitals and clinics that are run both in urban areas and rural areas. Hereafterwards no Private Nursing Home or Clinic can function without a licence from an appropriate authority Those who are already running Private Nursing Homes and Clinics will have to obtain licence from the competent authority within two month from the date on which the Ordinance has come into force We have prescribed a fee for all treatments and surgical operations that they do. According to the Bill, nobody is permitted to charge fee in excess of the scales that we have prescribed under the Rules. We have prescribed certain standards in the Rules and the Private Nursing Homes will have to conform to those standards and licences will have to be obtained from the competent authority. If per chance, the licences is not given within 90 days, it is provided that it is deemed that the licence is not sanctioned. A number of factors have got to be taken into consideration in giving licences, such as locality, qualified staff, nurses, technical personnel, etc.. prescribed under the law. The law also provides for inspection of these Private Nursing Homes by a competent authority. In order to find out whether the provisions as are contemplated are being observed, and any non-compliance of this order will Intail revocation of the licences by the competent authority. In order to give them an occasion to appeal, we have also provide for an appeal about the orders passed by the competent authority. The penalty prescribed for voilating any one of the provisions of law is six months imprisonment or Rs 5,000 fine. The cognizance of the voilation of this Act shall always be taken after a complaint made by the competent authority. Ceiling rates have been prescribed for various operations and treatment and most of the rates that we have prescribed have been looked into by most of the Nursing Home people and have been arrived at a consensus of our officers and those that are running the Private Nursing Homes. With these provisions it is hoped that it is possible to place these Private Nursing Homes in a better way, and that the control we have prscribed will result in better facilities to the people.

With these few remarks, I commend the Bill for consideration of the House.

†ಶ್ರೀ ಟಿ.ಆರ್. ಶಾಮಣ್ಣ.—ಮಾನ್ಯ ಸಭಾಧ್ಯಕ್ಷರೇ, ಮೊದಲನೆಯದಾಗಿ, ನಮ್ಮ ಘನ ಸರ್ಕಾರದವರು ಹೊರಡಿಸಿರತಕ್ಕಂಥ ಈ ಕರ್ನಾಟಕ ಪ್ರೈವೇಟ್ ನರ್ಸಿಂಗ್‌ಹೋಂಗಳ ಬಗೆ ಸುಗ್ರೀವಾಜ್ಞೆಯನ್ನು ಹೊರಡಿಸಿರುವುದಕ್ಕೆ ಅದರ ತತ್ವದ ಬಗ್ಗೆಯಾಗಲೀ ಅಥವಾ ಅದರ ಅವಶ್ಯಕತೆಯ ಬಗ್ಗೆ ಆಗಲೀ ನಾನು ವಿರೋಧವನ್ನು ವ್ಯಕ್ತಪಡಿಸುತ್ತಾ ಇಲ್ಲ. ಹಾಗೂ ನಮ್ಮ ಮಾನ್ಯ ಮಂತ್ರಿಗಳ ಬಗ್ಗೆ ನನಗೆ ಸಾಕಾದಷ್ಟು ಗೌರವ ಇದೆ. ಆದರೆ ಈ ಬಿಲ್ಲನ್ನು ತಂದಿರತಕ್ಕಂಥಾದ್ದರ ಬಗ್ಗೆ, ಮತ್ತು ಬಳಸಿರತಕ್ಕಂಥ ವಿಧಾನದ ಬಗ್ಗೆ ಮತ್ತು ಅದನ್ನು ಕಾರ್ಯಗತ ಮಾಡುವುದರಲ್ಲಿ ಏನು ತೊಡಕುಗಳಿವೆ ಅವುಗಳ ಬಗ್ಗೆ ನನ್ನ ಪೂರ್ಣ ವಿರೋಧವಿರುವುದರಿಂದ, ಅದರ ಬಗ್ಗೆ ಮತ್ತು ಅದರ ನಡವಳಿಕೆ ಬಗ್ಗೆ ನನ್ನ ವಿರೋಧವನ್ನು ವ್ಯಕ್ತಪಡಿಸಬೇಕಾಗಿದೆ.

ಮೊದಲನೆಯದಾಗಿ, ಜನಸಾಮಾನ್ಯರಿಗೆ ಸಂಬಂಧಪಟ್ಟಂಥ ಮತ್ತು ಅತಿ ಮುಖ್ಯವಾದಂಥ ನನ್ನ ತಿಳಿವಳಿಕೆ ಪ್ರಕಾರ ಇಡೀ ರಾಷ್ಟ್ರದಲ್ಲೇ ಇದು ಮೊದಲನೇ ಪ್ರಯೋಗ ಎಂದು ನಾನು ತಿಳಿದುಕೊಂಡಿದ್ದೇನೆ. ಇಂತಹ ಅತಿ ಮುಖ್ಯವಾದಂಥ ವಿಚಾರಗಳನ್ನು ಅವಸರವಸರವಾಗಿ ಹಿಂದುಮುಂದೆ ಸರಿಯಾಗಿ ಲೆಕ್ಕಾಚಾರ ಹಾಕದೇ ಸುಗ್ರೀವಾಜ್ಞೆ ಮುಖಾಂತರ ತಂದಿರುವುದಕ್ಕೆ ನಾನು ವಿರೋಧವನ್ನು ವ್ಯಕ್ತಪಡಿಸಬೇಕಾಗಿದೆ. ಈ ರೀತಿ ಅವಸರವಸರವಾಗಿ ಸುಗ್ರೀವಾಜ್ಞೆ ಮುಖಾಂತರ ತರುವುದಕ್ಕೆ ಬದಲಾಗಿ ಸಮಗ್ರವಾಗಿ ಚರ್ಚೆಮಾಡಿ, ಅದರ ಬಗ್ಗೆ ಇರತಕ್ಕಂಥ ಮಾಹಿತಿಗಳನ್ನು ಕ್ರೋಡೀಕರಿಸಿ, ಅದಕ್ಕೆ ಸಂಬಂಧಪಟ್ಟಹಾಗೆ ವಿವರಗಳನ್ನು ತಿಳಿದುಕೊಂಡು ನಂತರ ಈ ಬಿಲ್ಲನ್ನು ತಂದಿದ್ದರೆ ಚೆನ್ನಾಗಿತ್ತು. ಇದ್ದಕಿದ್ದಹಾಗೆ ಸುಗ್ರೀವಾಜ್ಞೆಯ ಮೂಲಕ ತಂದಿರುವುದು ಸೂಕ್ತವಲ್ಲ. ಈ ಒಂದು ಮುಸೂದೆಯನ್ನು ಗೆಜೆಟ್ ಮುಖಾಂತರ ಪಬ್ಲಿಷ್ ಮಾಡಿ ಜನಗಳಿಂದ ಸಾಕಾದಷ್ಟು ತಿಳಿವಳಿಕೆ ತೆಗೆದುಕೊಂಡು ಮಾಡಬಹುದಾಗಿತ್ತು. ಸುಗ್ರೀವಾಜ್ಞೆ ಹೊರಡಿಸಿದ ಮೇಲೆ ಪ್ರೈವೇಟ್ ನರ್ಸಿಂಗ್ ಹೋಂಗಳನ್ನು ಸರಿಪಡಿಸುವುದಕ್ಕೆ ಈ ಮಸೂದೆಯನ್ನು ತಂದಿದ್ದೀರಿ,

ಎರಡನೆಯದಾಗಿ, ಸರ್ಕಾರ ನಡೆಸುತ್ತಾ ಇರತಕ್ಕಂಥ ಆಸ್ಪತ್ರೆಗಳನ್ನು ಸರಿಪಡಿಸದೆ ಬೇರೆಯವರ ಪ್ರೈವೇಟ್ ನರ್ಸಿಂಗ್ ಹೋಂಗಳನ್ನು ಸರಿಪಡಿಸುವುದಕ್ಕೆ ಹೊರಟಿರುವುದು ಸರಿಯೇ ಎಂದು ಯೋಚನೆ ಮಾಡಬೇಕಾಗಿದೆ. ಮಂತ್ರಿಗಳು ಅನೇಕ ಕಡೆ, ಡಾಕ್ಟರ್ಸ್ ಸರಿಯಾಗಿ ಕೆಲಸ ಮಾಡುತ್ತಿಲ್ಲ, ಆಸ್ಪತ್ರೆಗಳು ಸರಿಯಿಲ್ಲ ಎಂದು ಹೇಳುತ್ತಿದ್ದಾರೆ. ಆದುದರಿಂದ ಮೊದಲು ನಮ್ಮ ಮನೆ ಶುದ್ಧಿಮಾಡಿಕೊಂಡು ನಂತರ ಬೇರೆಯವರ ಮನೆಯನ್ನು ಶುದ್ಧಿ ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದರೆ ಚೆನ್ನಾಗಿರುತ್ತಿತ್ತು ಎಂದು ನನಗನ್ನಿಸುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಡಾಕ್ಟರ್‌ಗಳು ಸರಿಯಿಲ್ಲ, ಆಸ್ಪತ್ರೆಗಳು ಸರಿಯಿಲ್ಲ ಎಂದು ಯಾವ ಮಂತ್ರಿಗಳು ಹೇಳಿದ್ದಾರೆ ?

ಶ್ರೀ ಟಿ. ಆರ್. ಶಾಮಣ್ಣ.—ಪೇಪರಿನಲ್ಲಿ ಬಂದಿತ್ತು. ಸರ್ಕಾರಿ ಆಸ್ಪತ್ರೆಗಳ ಬಗ್ಗೆ ಅನೇಕ ಸಾರಿ ಈ ಮನೆಯಲ್ಲಿ ಸದಸ್ಯರು ಟೀಕೆ ಮಾಡಿದ್ದಾರೆ ಸರ್ಕಾರಿ ಆಸ್ಪತ್ರೆಗಳಲ್ಲಿ ಸಾಕಷ್ಟು ಸ್ಥಳಾವಕಾಶ ಇಲ್ಲ, ಔಷಧಿಗಳು ಸರಿಯಾಗಿ ಸಿಕ್ಕುತ್ತಾ ಇಲ್ಲ, ಸಾಕಷ್ಟು ಹಾಸಿಗೆಗಳು ಇಲ್ಲ, ಹಾಸಿಗೆಗಳು ಇಲ್ಲದೆ ರೋಗಿಗಳನ್ನು ನೆಲದ ಮೇಲೆ ಹಾಕಿದ್ದಾರೆ. ಅಂತಹ ರೋಗಿಗಳಿಗೆ ಬೇಕಾದಂಥ ಲಿನನ್ ಮೊದಲಾದವುಗಳು ಸಾಕಷ್ಟು ಸರಬರಾಜು ಇಲ್ಲ. ಯಾವುದೋ ಕಾಲದಲ್ಲಿ ನಿಗದಿ ಮಾಡಿದಂಥ ಕೋಟಾದಲ್ಲಿ ಬಡ್ಜೆಟ್ಟಿನಲ್ಲಿ ಎಷ್ಟೇ ಹಣ ಕೊಟ್ಟರೂ ಸರಿಯಾಗಿ ಸಾಕಷ್ಟು ಔಷಧಿಸಾಮಗ್ರಿಗಳು ಸರಬರಾಜು ಎಲ್ಲಾ ಆಸ್ಪತ್ರೆಗಳಿಗೆ ಆಗುತ್ತಾ ಇಲ್ಲವೆಂದು ಹೇಳುತ್ತೇನೆ. ಅದು ಒಂದು ದೊಡ್ಡ ಲೋಪವೆಂದು ನಾನು ತಿಳಿದಿದ್ದೇನೆ. ಅಲ್ಲಿರತಕ್ಕ ವೈಟಿಂಗ್ ರೂಂಗಳು ಬಹಳ ಕ್ಲೀನ್ ಆಗಿರಬೇಕು. ರೋಗಿಗಳು ಬಂದರೆ ಕೂತುಕೊಳ್ಳುವುದಕ್ಕೆ ಎಷ್ಟು ಆಸ್ಪತ್ರೆಗಳಲ್ಲಿ ಸರಿಯಾದ ಅನುಕೂಲಗಳಿವೆ ಎಂಬುದನ್ನು ಹೇಳಬೇಕು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಔಟ್ ಪೇಷೆಂಟ್‌ನಲ್ಲಿ ಜಾತ್ರೆ ಇದ್ದಹಾಗೆ ಇದೆ

ಶ್ರೀ ಎಚ್. ಎಂ. ಚನ್ನಬಸಪ್ಪ.—೧೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಬೇಕಾದಷ್ಟು ಸೌಕರ್ಯಗಳನ್ನು ಒದಗಿಸಿಕೊಟ್ಟಿರುವುದು ಮಾನ್ಯ ಸದಸ್ಯರಿಗೇ ಗೊತ್ತಿದೆ. ಮಾನ್ಯ ಸದಸ್ಯರಿಗೇನಾಗಿದೆ, ಇದರ ಬಗ್ಗೆ ಏನಾದರೂ ಕ್ರಿಟಿಸಿಜಂ ಮಾಡದೆ ಈ ಮಸೂದೆಯನ್ನು ಏಕೆ ಪಾಸ್ ಮಾಡಬೇಕೆಂದು ಕೆಲವು ವಿಚಾರಗಳನ್ನು ಹೇಳುತ್ತಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—ಹಾಗೆಯೇ ಎಲ್ಲಾ ಕಡೆಗಳಲ್ಲಿಯೂ ಮಾಡಲಿ. ಒಳ್ಳೆಯದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಇಲ್ಲವೆಂದು ಏಕೆ ಹೇಳುತ್ತೀರಿ ? ಅನೇಕ ಪ್ರಯೋಗಗಳನ್ನು ಈಗಾಗಲೇ ಅಲ್ಲಿ ಮಾಡುತ್ತಿದ್ದಾರೆ. ಅಂದಮೇಲೆ ಅಲ್ಲಿ ಏನೋ ಸರಿಯಾಗಿಲ್ಲ ವೆಂದು ಹೇಳುವುದು ಸರಿಯಲ್ಲ

ಶ್ರೀ ಟಿ. ಆರ್. ಶಾಮಣ್ಣ.—ಆಸ್ಪತ್ರೆಗಳಲ್ಲಿ ನೀರಿನ ಸೌಕರ್ಯ ಹೆಚ್ಚಿಗೆ ಬೇಕು. ನೀವು ಪ್ರತಿ ಯೊಂದಕ್ಕೂ ಆರ್ಡಿನೆನ್ಸ್ ಹೊರಡಿಸುತ್ತಿದ್ದೀರಿ. ಆದರೆ ಇಂತಹ ವಿಚಾರಗಳಲ್ಲಿ ಏಕೆ ಗಮನಕೊಡುತ್ತಾ ಇಲ್ಲ? ೨೨೫ ಲೀಟರ್ ನೀರನ್ನು ಎಷ್ಟು ಸರ್ಕಾರೀ ಆಸ್ಪತ್ರೆಗಳಲ್ಲಿ ಒದಗಿಸಿದ್ದೀರಿ ಎಂಬ ಬಗ್ಗೆ ನನಗೆ ಮಾಹಿತಿ ಬೇಕು. ಅನೇಕ ಸಂದರ್ಭಗಳಲ್ಲಿ ಬ್ಲಡ್ಡನ್ನು ೪೦-೫೦ ರೂಪಾಯಿಗಳನ್ನು ಕೊಟ್ಟು ಹೊರಗಡೆ ಯಿಂದ ತರಬೇಕು. ಇನ್ನು ಫರ್ನಿಚರ್ ಬಗ್ಗೆ ಸಾಕಾದಷ್ಟು ವಿಚಾರಗಳನ್ನು ಇಲ್ಲಿ ಹೇಳಿದ್ದಾರೆ. ಯಾವ್ಯಾವ ಆಸ್ಪತ್ರೆಗಳಲ್ಲಿ ಫರ್ನಿಚರ್ ಸರಿಯಾಗಿದೆ, ಎಷ್ಟೆಷ್ಟು ಇರಬೇಕೆಂದು ನಿಗದಿಮಾಡಿದ್ದೀರಿ ಅದರ ಬಗ್ಗೆ ವ್ಯವಸ್ಥೆ ಸರಿಯಾಗಿದೆಯೇ ಎಂಬುದನ್ನು ನೋಡಬೇಕು. ರೋಗಿಗಳು ಸರಿಯಾಗಿ ಆಸ್ಪತ್ರೆಗಳಲ್ಲಿ ಓಡಾಡು ವುದಕ್ಕೆ ಸ್ಥಳ ಸಾಕಷ್ಟು ಇರುವುದಿಲ್ಲ ಎಲ್ಲಾ ಕಡೆಗಳಲ್ಲಿಯೂ ಹಾಸಿಗೆಗಳನ್ನು ಹಾಕಿರುತ್ತಾರೆ. ಅದನ್ನು ಏಕೆ ಸರಿಪಡಿಸಬಾರದು? ಎಕ್ಸರೇ ಮೆಷಿನ್‌ಗಳು ಸರಿಯಾಗಿ ಎಲ್ಲಾ ಆಸ್ಪತ್ರೆಗಳಲ್ಲಿ ಚೆನ್ನಾಗಿ ಕೆಲಸಮಾಡು ತ್ತಿವೆಯೇ? ಫಿಲಂಸ್ ದಾಸ್ತಾನು ಪ್ರತಿಯೊಂದು ಆಸ್ಪತ್ರೆಯಲ್ಲಿ ಎಷ್ಟೆಷ್ಟಿದೆಯೆಂಬ ಬಗ್ಗೆ ಏನಾದರೂ ನೀವು ಲೆಕ್ಕ ತರಿಸಿಕೊಂಡಿದ್ದೀರಾ? ಏಕೆಂದರೆ ನನಗೆ ತಿಳಿದಿರುವ ಹಾಗೆ ಅನೇಕ ಆಸ್ಪತ್ರೆಗಳಲ್ಲಿ ಕಳ್ಳತನಗಳು ಹೆಚ್ಚಾಗಿ ಆಗುತ್ತಿವೆ. ರೋಗಿಗಳ ಟಿಫಿನ್ ಕ್ಯಾರಿಯರ್ಸ್, ಬಟ್ಟೆಗಳು ಔಷಧಿಗಳು ಅಲ್ಲಿ ಕಳ್ಳತನವಾಗು ತ್ತಿರುವಾಗ ಅತ್ತಕಡೆಗೆ ಸರ್ಕಾರದ ಗಮನ ಹೋಗುತ್ತಿದೆಯೇ? ರಾತ್ರಿ ಹೊತ್ತು ಅಲ್ಲಿ ಕೆಲಸ ಮಾಡುವವ ರಲ್ಲಿ ಎಷ್ಟೋ ಜನರು ಕುಡಿದು ಬರುತ್ತಾರೆಂಬುದು ತಮಗೆ ಗೊತ್ತಿದೆಯೇ? ಪ್ರೈವೇಟ್ ನರ್ಸಿಂಗ್ ಹೋಂ ಗಳಲ್ಲಿ ಇಂತಹ ಸೌಕರ್ಯಗಳು ಇರಬೇಕೆಂದು ತಾವು ಈಗಾಗಲೇ ಉಲ್ಲೇಖಿಸಿದ್ದೀರಿ. ಅದೇ ಪ್ರಕಾರ ಸರ್ಕಾರದ ಆಸ್ಪತ್ರೆಗಳಲ್ಲಿಯೂ ಮಾಡಬೇಕು. ಆ ವಿಚಾರದಲ್ಲಿ ಆದ್ಯತೆ ಕೊಡಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರದ ಆಸ್ಪತ್ರೆಗಳಲ್ಲಿ ಫ್ರೀ ಟ್ರೀಟ್‌ಮೆಂಟ್ ಕೊಡುತ್ತೇವೆ. ಪ್ರೈವೇಟ್ ಆಸ್ಪತ್ರೆಗಳಲ್ಲಿ ಆ ರೀತಿಯಾಗಿ ಎಲ್ಲಿ ಕೊಡುತ್ತಾರೆ ?

ಶ್ರೀ ಟಿ. ಆರ್. ಶಾಮಣ್ಣ.—ಕೆಲವು ಸರ್ಕಾರದ ಆಸ್ಪತ್ರೆಗಳಲ್ಲಿ ಕೆಲಸಮಾಡುವವರಲ್ಲಿ ಅನೇಕರು ಸ್ಪಿರಿಟ್ ಸಹ ಕುಡಿಯುತ್ತಾರೆ. ಆದರೆ ಎಷ್ಟು ಆಸ್ಪತ್ರೆಗಳಲ್ಲಿ ಸ್ಪಿರಿಟ್ ಸ್ಟಾಕ್ ಇರುತ್ತದೆ? ಆದರೆ ಸರ್ಕಾರದ ಆಸ್ಪತ್ರೆಗಳಲ್ಲಿ ಸರಿಯಾದ ಚಿಕಿತ್ಸೆಯನ್ನು ಪಡೆಯಬೇಕಾದರೆ ಹೆಚ್ಚು ದುಡ್ಡು ಇರಬೇಕು. ಪ್ರಭಾವಶಾಲಿಗಳಾಗಿರಬೇಕು, ಇನ್‌ಫ್ಲುಯೆನ್ಸ್ ಹೆಚ್ಚಿರಬೇಕು. ಆದ್ದರಿಂದ ಈ ರೀತಿಯಾಗಿ ಪ್ರಭಾವ ಬೀರತಕ್ಕ ವ್ಯವಹಾರ ನಡೆಯುತ್ತಿರುವುದನ್ನು ತಪ್ಪಿಸುವುದಕ್ಕೆ ಎಷ್ಟರ ಮಟ್ಟಿಗೆ ಪ್ರಯತ್ನಪಟ್ಟಿದ್ದೀರಿ ಎಂಬುದನ್ನು ಹೇಳಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ನಿಜವಾಗಿ ಹೆಚ್ಚಿನ ಸೌಲಭ್ಯವಿದ್ದಿದ್ದರೆ ಈ ರೀತಿಯಾ ದಂಥ ತಿದ್ದುಪಡಿ ಮಸೂದೆ ಏಕೆ ಇಲ್ಲಿ ಬರಬೇಕಾಗಿತ್ತು? ಪ್ರೈವೇಟ್ ನರ್ಸಿಂಗ್ ಹೋಂನಲ್ಲಿ ಹೆಚ್ಚಿನ ಸೌಲಭ್ಯಗಳು ಸಿಗುತ್ತಿರುವುದರಿಂದ ಸರ್ಕಾರದ ಆಸ್ಪತ್ರೆಗಳಿಗೆ ಬರುತ್ತಿಲ್ಲ. ಸರ್ಕಾರದ ಆಸ್ಪತ್ರೆಗಳಲ್ಲಿ ಹೆಚ್ಚು ಸೌಲಭ್ಯಗಳು ಸಿಗುತ್ತಿದ್ದರೆ ಖಾಸಗಿ ಆಸ್ಪತ್ರೆಗಳಿಗೆ ಜನ ಏಕೆ ಹೋಗುತ್ತಿದ್ದರು? ಸರ್ಕಾರದ ಆಸ್ಪತ್ರೆಗಳಲ್ಲಿ ಆ ರೀತಿಯಾದಂಥ ಸೈಕಾಲಜಿ ಬರುವಹಾಗೆ ವ್ಯವಸ್ಥೆ ಮಾಡಬೇಕು. ಆದ್ದರಿಂದ ತಾವು ಇದರ ಬಗ್ಗೆ ಆರ್ಡಿನೆನ್ಸ್ ಹೊರಡಿಸುವುದಕ್ಕೆ ಮುಂಚೆ ಇದರ ಬಗ್ಗೆ ಕೂಲಂಕಷವಾಗಿ ಯೋಚನೆಮಾಡಿ ತಮ್ಮ ಗಮನವನ್ನು ಹರಿಸಿದ್ದರೆ ಬಹಳ ಚೆನ್ನಾಗಿತ್ತು. ನಾನೂ ಸಹ ಬಹಳ ಸಂತೋಷಪಡುತ್ತಿದ್ದೆ. ಈಗ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ಈ ರೀತಿಯಾಗಿ ಒಂದು ಆರ್ಡಿನೆನ್ಸ್ ಹೊರಡಿಸಿದ ಮೇಲೆ ಎಲ್ಲಾ ರೀತಿಯಲ್ಲಿಯೂ ಅನುಕೂಲವಾಗುತ್ತದೆಂದು ತಾವು ತಿಳಿದುಕೊಂಡಿರಬಹುದು. ಅದು ನಿಜವಾಗಿ ಸತ್ಯಕ್ಕೆ ದೂರವಾದುದಾಗಿದೆ. ಮೊಟ್ಟಮೊದಲನೆಯದಾಗಿ ಲೈಸೆನ್ಸ್ ತೆಗೆದುಕೊಳ್ಳುವುದ ರಲ್ಲಿ ಆಗತಕ್ಕಂಥ ಕರಪ್ಷನ್ ಇನ್ನೆಲ್ಲಿಯೂ ಆಗುವುದಿಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಲೈಸೆನ್ಸ್ ಪಡೆಯುವುದರೊಳಗೆ ಲಂಚರುಷುವತ್ತು ಆಗುತ್ತಾ ಇರುವುದನ್ನು ತಪ್ಪಿಸಿ ಎಂದು ಹೇಳುವುದನ್ನೇನೋ ಒಪ್ಪಿಕೊಳ್ಳೋಣ. ಅಂದಮೇಲೆ ಈಗ ಲೈಸೆನ್ಸ್ ಬೇಡವೆಂದು ಹೇಳುತ್ತೀರಾ? ಕೆಲವಾರು ನಿಬಂಧನೆಗಳನ್ನು ಹಾಕಿ ಹೋಟೆಲುಗಳಿಗೆ ಲೈಸೆನ್ಸ್ ಕೊಡುವ ಹಾಗೆ ಇಲ್ಲಿಯೂ ಹಾಕುವುದು ಒಳ್ಳೆಯದು.

ಒಬ್ಬ ಸದಸ್ಯರು.—ಈ ಮಸೂದೆಯಲ್ಲಿ ಹೋಟೆಲುಗಳ ವಿಚಾರ ಬರುವುದಿಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಕಾರ್ಪೊರೇಷನ್ನಿನಲ್ಲಿ ಹೆಲ್ತ್ ಆಫೀಸರ್ ಒಬ್ಬರನ್ನು ಮಾತ್ರ ಹಾಕಿದ್ದಾರೆ. ಲೈಸೆನ್ಸ್‌ಗೆ ಎಷ್ಟು ಲಂಚ ತೆಗೆದುಕೊಳ್ಳುತ್ತಾರೆಂಬುದು ಎಲ್ಲರಿಗೂ ಗೊತ್ತು. ಈ ವಿಚಾರವನ್ನು ನಾನು ಅವರ ಎದುರಿಗೇ ನಾನು ಹೇಳಿದ್ದೇನೆ. ಲಂಚವನ್ನು ಇನ್ನೂ ಅನೇಕರು ಅಲ್ಲಿ ತೆಗೆದುಕೊಳ್ಳುತ್ತಿದ್ದಾರೆಂದು ನಾನು ಹೇಳಿದ್ದೇನೆ. ಒಂದು ಫೈಲ್ ಮುಂದಕ್ಕೆ ಹೋಗಬೇಕಾದರೆ, ಎಷ್ಟೋ ಲಂಚ ಕೊಡಬೇಕು. ಇನ್ನೂ ಅನೇಕರು ಅಲ್ಲಿ ಈ ರೀತಿ ಲಂಚಗಳನ್ನು ತೆಗೆದುಕೊಳ್ಳುವುದೂ ಉಂಟು. ನಾನಾ ರೀತಿಯಲ್ಲಿ ಅಲ್ಲಿ ಲಂಚವನ್ನು ತೆಗೆದುಕೊಳ್ಳುತ್ತಿದ್ದಾರೆ. ಅಲ್ಲಿ ಬೇಕಾದಷ್ಟು ಲಂಚ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆಯೆಂದು ನಾನು ಎಷ್ಟೋ ಸಾರಿ ತಮ್ಮ ಗಮನಕ್ಕೆ ತಂದಿದ್ದೇನೆ, ಅದನ್ನು ಕೂಡಲೇ ತಪ್ಪಿಸುವುದಕ್ಕೆ ಸೂಕ್ತ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೆ ನಿಮ್ಮ ಸಲಹೆ ಏನೆಂಬುದನ್ನು ಹೇಳಿ.

ಶ್ರೀ ಟಿ. ಆರ್. ಶಾಮಣ್ಣ.—ಅದಕ್ಕೆ ಸಲಹೆಗಳನ್ನು ಸಹ ಹೇಳುತ್ತೇನೆ. ಇದಕ್ಕೆ ಸಂಬಂಧಪಟ್ಟ ಮಸೂದೆ ಬಂದಾಗ ಅವೆಲ್ಲವನ್ನೂ ವಿವರವಾಗಿ ಹೇಳುತ್ತೇನೆ, ಇಂಥಾದ್ದನ್ನು ಈಗ ಅವಸರವಸರವಾಗಿ ಆರ್ಡಿನೆನ್ಸ್ ಮುಖಾಂತರ ತರಬಾರದಾಗಿತ್ತು.

ಇನ್ನೊಂದು ಅಂಶ. ಕಾನ್‌ಸ್ಟಿಟ್ಯೂಷನ್ನಿನಲ್ಲಿ ಅನೇಕ ಮೈನಾರಿಟಿ ಇನ್‌ಸ್ಟಿಟ್ಯೂಷನ್‌ಗಳಿಗೆ ಸೇಫ್‌ಗಾರ್ಡ್ ಇದೆ. ಖಾಸಗಿ ಇನ್‌ಸ್ಟಿಟ್ಯೂಷನ್‌ಗಳನ್ನು ಅದಕ್ಕಾಗಿ ನಡೆಸುತ್ತಿದ್ದಾರೆ. ಸರ್ಕಾರದ ಆಸ್ಪತ್ರೆಗಳನ್ನು ಬಿಟ್ಟು ಮಿಕ್ಕ ಪ್ರೈವೇಟ್ ನರ್ಸಿಂಗ್ ಹೋಂಗಳಿಗೆ ಆ ರೀತಿಯ ಸೇಫ್‌ಗಾರ್ಡ್ ಇಲ್ಲ. ಹೆಚ್ಚು ಸಂಖ್ಯೆಯಲ್ಲಿ ಮಿಷನ್ ಆಸ್ಪತ್ರೆಗಳಲ್ಲಿ ಕಾನ್‌ಸ್ಟಿಟ್ಯೂಷನ್ ಪ್ರೊಟೆಕ್ಷನ್ ಕೇಳುವುದು ಜಾಸ್ತಿಯಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದರಲ್ಲಿ ಏನು ಕಾನ್‌ಸ್ಟಿಟ್ಯೂಷನ್ ಡಿಫಿಕಲ್ಟಿ ಇದೆ ?

ಶ್ರೀ ಟಿ. ಆರ್. ಶಾಮಣ್ಣ.—ಇದರಲ್ಲಿ ಇರುವ ಒಂದು ಮುಖ್ಯವಾದ ಅಂದರೆ ಬಹಳ ಪ್ರಭಾವಯುತವಾದ ಸೆಕ್ಷನ್ ಇದೆ. ದಯವಿಟ್ಟು ಇದರ ಬಗೆ ಯೋಚನೆ ಮಾಡಿ ಎಂದು ಹೇಳುತ್ತೇನೆ. ಇದರಲ್ಲಿ ನಾನು ಮೂಲಭೂತವಾಗಿ ಹೇಳುವುದೆಂದರೆ ಎಲ್ಲಾ ಆಸ್ಪತ್ರೆಗಳನ್ನು ಒಂದೇ ವಿಧವಾಗಿ ಭಾವಿಸಿದರೆ ಆಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ಈ ಹೋಟೆಲ್‌ಗಳ ದರವನ್ನು ನಿಗದಿಮಾಡುವಾಗ ಎಲ್ಲಾ ಹೋಟೆಲ್‌ಗಳಲ್ಲಿಯೂ ಒಂದೇ ರೇಟು ಇರಬೇಕು ಎಂದು ಮಾಡಿಬಿಟ್ಟು ಎಷ್ಟೋ ಹೋಟೆಲ್‌ಗಳನ್ನು ಮುಚ್ಚುವುದಕ್ಕೆ ಅವಕಾಶ ಮಾಡಿಕೊಟ್ಟು ಕೊನೆಗೆ ಪುನರ್‌ವಿಮರ್ಶೆ ಮಾಡಿದಮೇಲೆ ಆ ಹೋಟೆಲ್ ದರಗಳು ಈಗ ಒಂದಕ್ಕೆರಡಾಗುವುದಕ್ಕೆ ಅವಕಾಶವಾಗಿದೆ. ಆದ್ದರಿಂದ ಹಳ್ಳಿಯಲ್ಲಿರುವ ಆಸ್ಪತ್ರೆಯೂ ಒಂದೇ ದೊಡ್ಡದೊಡ್ಡ ಸ್ಪೆಷಲಿಸ್ಟ್ ಇರುವ ಆಸ್ಪತ್ರೆಗಳು ಒಂದೇ ಎಂದು ಮಾಡಿದರೆ ಹೇಗೆ?

ಶ್ರೀ ಹೆಚ್.ಎಂ. ಚೆನ್ನಬಸಪ್ಪ.—ಹಳ್ಳಿಯಲ್ಲಿರುವ ಜನರಿಗೆ ಮಲೇರಿಯಾ ಬಂದರೆ ಅವರಿಗೆ ಬೇರೆ ಔಷಧ ಪಟ್ಟಣದಲ್ಲಿ ವಾಸಮಾಡುವವರಿಗೆ ಮಲೇರಿಯಾ ಬಂದರೆ ಅವರಿಗೆ ಬೇರೆ ಔಷಧಿಯನ್ನು ಕೊಡುವುದಕ್ಕೆ ಬರುತ್ತದೆಯೇ?

ಶ್ರೀ ಟಿ.ಆರ್, ಶಾಮಣ್ಣ.—ಹಾಗಾದರೆ ನೀವು ಎಲ್ಲಾ ಮಂತ್ರಿಗಳನ್ನು ಒಂದೇ ರೀತಿ ಏತಕ್ಕೆ ಮಾಡಬಾರದು. ಅದರಲ್ಲಿ ಕ್ಯಾಬಿನೆಟ್, ಸ್ಟೇಟ್ ಎಂದು ಏತಕ್ಕೆ ವ್ಯತ್ಯಾಸ?

MR. DEPUTY SPEAKER.—Under which article of the Constitution the minorities have got a right to maintain medical institutions in any manner they want?

SRI T. R. SHAMANNA.—In Kerala the minorities are running educational institutions......

MR. DEPUTY SPEAKER,—There is provision in the Constitution for the minorities to run educational institutions. But not Medical institutions. When the hon. member speaks I want him to be kindly enlightened about the provisions in the Constitution. Please be in firm footing.

SRI H. M. CHANNABASAPPA. I would like to enlighten the hon'ble member that all minorities whether based on language or religion have a right run educational institutions of their choice but not medical institutions of their choice.

SRI T. R. SHAMANNA —I withdraw that part of my statement, I will correct myself wherever I am pointed out to be wrong ಇನ್ನೊಂದು ಮುಖ್ಯವಾದ ವಿರೋಧ ಏನು ಎಂದರೆ ರೂಲ್ಸ್ ಮಾಡುವಾಗ ಸ್ವೀಪಿಂಗ್ ಪವರ್ಸ್ ಸರ್ಕಾರ ತೆಗೆದು ಕೊಂಡರೆ ಹೇಗೆ?

SRI H. M. CHANNABASAPPA.—The power to make rules is always with the Government

SRI T, R. SHAMANNA.—There is possibility to make rules as they like.

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಾನೂನನ್ನು ಜಾರಿ ಮಾಡುವಾಗ ಕೆಲವು ಅಧಿಕಾರಗಳನು ತೆಗೆದುಕೊಳ್ಳಲೇಬೇಕಾಗುತ್ತದೆ. Lawyers will kindly bear with me that to make rules is one of the essentials of an Act. Is the hon'ble member objecting to the rule making power?

SRI T. R. SHAMANNA —My objection now is only against the ordinance issued. ಆದುದರಿಂದ ಮೇಲೆ ಹೇಳಿದ ಕಾರಣಗಳಿಂದ ಆರೋಗ್ಯ ಇಲಾಖೆಯ ಮೇಲೆ ಸಾಕಷ್ಟು ಸಾರ್ವಜನಿಕರ ಹಣವನ್ನು ಖರ್ಚು ಮಾಡುವುದರಿಂದ ಆರ್ಡಿನೆನ್ಸ್ ಹೊರಡಿಸುವಾಗ ದಿಡೀರ್ ಎಂದು ತಂದು ಜನರಿಗೆ ಬಹಳ ತೊಂದರೆಯಾಗುವುದರಿಂದ ಇದಕ್ಕೆ ನನ್ನ ಪೂರ್ಣ ವಿರೋಧವಿದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ

ಇನ್ನು ಕಾಂಪಿಟೆಂಟ್ ಅಥಾರಿಟಿಗೆ ಈ ಮಸೂದೆಯಲ್ಲಿ ಸಾಕಷ್ಟು ಅಧಿಕಾರವನ್ನು ಕೊಟ್ಟಿದ್ದೀರಿ. ಅದರಲ್ಲಿ ಲೈಸೆನ್ಸ್ ಕೊಡತಕ್ಕಂಥದ್ದು ಪ್ರೈವೇಟ್ ನರ್ಸಿಂಗ್ ಹೋಮ್ಸ್ ಸರಿಯಾಗಿ ಕೆಲಸ ಮಾಡುತ್ತಾ ಇದೆಯೋ ಇಲ್ಲವೇ ಎನ್ನುವುದು.

> "nursing home" means a hospital or a clinic or any other place where human diseases are given preventive and/or curative medical treatment;
>
> "Private nursing home" means a nursing home which is not owned or sponsored by the State or the Central Government;
>
> "Medical treatment means treatement in modern medicine or in any other system of medicine like the Ayurvedic, the Unani, the Homoeopathic and the Naturopathic"

ಆದುದರಿಂದ ಕಾಂಪಿಟೆಂಟ್ ಅಥಾರಿಟಿಗೆ ಸಾಕಷ್ಟು ಅಧಿಕಾರವನ್ನು ಕೊಡಲಾಗಿದೆ. ಇದನ್ನು ಏರ್ಪಾಡು ಮಾಡುವಾಗ ಅದನ್ನು ಯಾವರೀತಿ ಬೇಕಾದರೂ ಅವರು ಅದನ್ನು ಉಪಯೋಗಿಸಬೇಕು ಅಥವಾ ಅವರಿಗೂ ಇತಿಮಿತಿ ಇದೆಯೋ? ಎನ್ನುವುದು ಗೊತ್ತಾಗುವುದಿಲ್ಲ. ಕಾಂಪಿಟೆಂಟ್ ಅಥಾರಿಟಿಯನ್ನು ಅಧಿಕಾರಕ್ಕೆ ತರುವಾಗ ದಯವಿಟ್ಟು ಅದರಲ್ಲಿ ಮೆಡಿಕಲ್ ಅಸೋಸಿಯೇಷನ್ ರೆಪ್ರೆಸೆಂಟೆಟೀವ್ ಹಾಕಿದ್ದರೆ ಸ್ವಲ್ಪ ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

SRI H. M. CHANNABASAPPA.—Competent authority will have to keep a watch over the working of institution and make check and draw attention to defects and deficiencies. ಮೆಡಿಕಲ್ ಅಸೋಸಿಯೇಷನ್ ರೆಪ್ರೆಸೆಂಟೆಟೀವ್ ಹಾಕಬೇಕಾದರೆ ಅದರ ಚೇರ್‌ಮನ್ ಅವರನ್ನು ಹುಡುಕಿಕೊಂಡು ಹೋಗಿ ತೆಗೆದುಕೊಂಡು ಬಂದು ಹಾಕುವುದಕ್ಕೆ ಸಾಧ್ಯವೇ?

ಯಾವುದೋ ಒಂದು ಅಸೋಸಿಯೇಷನ್ನಿನ ಚೇರ್ಮನ್‌ರವರನ್ನು ದೂರದ ಊರಿಗೆ ತೆಗೆದುಕೊಂಡು ಹೋಗಿ ಹಾಕಿ ಎಂದರೆ, ಅಲ್ಲಿಗೆ ಅವನು ಹೋಗಿ ಕೆಲಸ ಮಾಡಲು ಸಾಧ್ಯವೇ?

4-30 P.M.

ಶ್ರೀ ಟಿ.ಆರ್. ಶಾಮಣ್ಣ.—ತಾವು ಎಷ್ಟೋ ಕಮಿಟಿಗಳನ್ನು ಮಾಡಿದ್ದೀರಿ, ಅದರಲ್ಲಿ ಸರ್ಕಾರದ ಪ್ರತಿನಿಧಿಗಳಲ್ಲದೇ, ಇತರ ಖಾಸಗಿಯವರನ್ನು ನೇಮಕ ಮಾಡಿಲ್ಲವೇ?

SRI H. M. CHANNABASAPPA.—Now there are several hundreds of these institutions distributed all over the Country. ಇಂಡಿಯನ್ ಮೆಡಿಕಲ್ ಕೌನ್ಸಿಲಿನ ಚೇರ್ಮನ್‌ರವರನ್ನೋ, ಮೈಸೂರು ಮೆಡಿಕಲ್ ಕೌನ್ಸಿಲ್‌ರವರನ್ನೋ ಅಲ್ಲಿಗೆ ಹಾಕಿದರೆ ಎಲ್ಲಾ ಸರಿಹೋಗುತ್ತದೆಯೋ?

SRI T. R. SHAMANNA.—What I am suggesting is that in a place where there are a large number of private nursing homes there are a large number of people who can be entrusted with this job. This will avoid corruption and other mal-practices.

ಶ್ರೀ ಎಚ್.ಎಂ. ಚೆನ್ನಬಸಪ್ಪ.—ನೀವು ಹೇಳಿದವರನ್ನು ಹಾಕಿದರೆ ಅವರು ಮಾತ್ರ ಕರಪ್ಟ್ ಆಗುವುದಿಲ್ಲವೆಂದು ಹೇಗೆ ಹೇಳುತ್ತೀರಿ? ನಮ್ಮ ಅಧಿಕಾರಿಗಳು ಮಾತ್ರ ಕರಪ್ಟ್ ಎಂದು ನೀವು ಹೇಗೆ ಹೇಳುತ್ತೀರಿ?

SRI T. R. SHAMANNA.—There are the days in which you should have checks and counter-checks. ಆದುದರಿಂದ ದಯವಿಟ್ಟು ತಾವು ಕಾಂಪಿಟೇಟಿವ್ ಅಥಾರಿಟಿಯನ್ನು ನೇಮಕ ಮಾಡುವಾಗ ಸ್ವಲ್ಪ ಎಚ್ಚರಿಕೆಯನ್ನು ವಹಿಸಿ ಮಾಡುವುದು ಒಳ್ಳೆಯದೆಂದು ಕಾಣುತ್ತದೆ ಪ್ರೈವೇಟ್ ನರ್ಸಿಂಗ್ ಹೋಂಗಳಲ್ಲಿ ಮತ್ತಿತರ ಕಡೆಗಳಲ್ಲಿರುವ ನರ್ಸಿಂಗ್ ಹೋಂಗಳನ್ನು ಕಂಟ್ರೋಲ್ ಮಾಡುವುದಕ್ಕೆ ನಮ್ಮ ರೂಲ್ಸ್‌ಗಳಲ್ಲಿ, ಬೈಲಾಗಳಲ್ಲಿ ಸಾಕಷ್ಟು ಅಧಿಕಾರವಿಲ್ಲ, ಮತ್ತು ಅದಗಲ್ಲಿ ಅನೇಕ ಲೋಪಗಳಿವೆ ಎಂದು ಹೇಳಿದ್ದೀರಿ ಅನೇಕ ಲೋಪಗಳನ್ನು ಕೆಟಗರೈಜ್ ಮಾಡುತ್ತಾ ಅನೇಕ ಪಟ್ಟಿಗಳನ್ನು ಕೊಟ್ಟು ಇಷ್ಟಕ್ಕೆ ಇಷ್ಟು ಕೊಡಬೇಕೆಂದು ಹೇಳಿದ್ದಾರೆ. ನಾನು ಈ ಬಿಲ್ಲನ್ನು ನೋಡಿದ್ದರಲ್ಲಿ ಈ ಡೆಂಟಲ್ ಬಗ್ಗೆ ಯಾವ ವಿಧವಾದಂಥ ಜಮಾ ಖರ್ಚನ್ನು ಹಾಕಿಲ್ಲ ಅದು ಬಿಟ್ಟು ಹೋಗಿದೆ. ಇದು ಬಹಳ ಮುಖ್ಯವಾದದ್ದು. ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ರೋಗಿಗಳು ಇರುತ್ತಾರೆ. ಇವತ್ತು ಒಂದು ಹಲ್ಲು ಕಟ್ಟಬೇಕಾದರೆ ಪ್ರೈವೇಟ್ ಡಾಕ್ಟರುಗಳು ೨-೩ ನೂರು ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ಅದೇ ಸರ್ಕಾರಿ ಆಸ್ಪತ್ರೆಯಲ್ಲಿ ಆದರೆ ಒಂದುನೂರು ರೂಪಾಯಿಗಳು ಕೂಡ ಆಗುವುದಿಲ್ಲ ಅಂಥದರಲ್ಲಿ ತಮ್ಮ ಗಮನ ಇತ್ತ ಕಡೆಗೆ ಏತಕ್ಕೆ ಬಿದ್ದಿಲ್ಲ. ನಿಮ್ಮ ಆಫೀಸರ್‌ಗಳು ಅವಸರದಲ್ಲಿ ಮಾಡಿರತಕ್ಕಂಥ ಬಿಲ್ಲು ಇದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಂಥ ಹಲವಾರು ನಿದರ್ಶನಗಳನ್ನು

ನಾನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಸೈಕ್ರಟೀಸ್‌ಗೆ ಎಷ್ಟು ಕೊಡಬೇಕು ಎನ್ನುವ ಬಗ್ಗೆ ಕೂಡ ಹೇಳಿಲ್ಲ. ಅನೇಕ ಸಂದರ್ಭಗಳಲ್ಲಿ ವಿಲ್ ಬರೆಯುವಾಗ ಕೂಡ ಸಾವಿರಾರು ರೂಪಾಯಿಗಳ ಫೀಜನ್ನು ಕೊಡುತ್ತಾರೆ. ಅದರ ಬಗ್ಗೆ ಕೂಡ ಬಿಟ್ಟು ಹೋಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಹೇಳಿದ ಡೆಂಟಲ್ ಹ್ಯೂಮನ್ ಡಿಸೀಜ್‌ನಲ್ಲಿಯೇ ಬರುತ್ತದೆ. ಅದು ಕೂಡ ಪ್ರೈವೇಟ್ ನರ್ಸಿಂಗ್ ಹೋಮ್ ಬಿಲ್ಲಿನಲ್ಲಿಯೇ ಬರುತ್ತದೆ.

ಶ್ರೀ ಟಿ. ಆರ್. ಶಾಮಣ್ಣ.—ಆ ಮೇಲೆ ಆಯುರ್ವೇದಿಕ್ ಬಗ್ಗೆ ಪ್ರಸ್ತಾಪವೇ ಇಲ್ಲ. ಏತಕ್ಕೆಂದರೆ ಮೊನ್ನೆ ನಡೆದ ಒಂದು ಸಣ್ಣ ನಿದರ್ಶನವನ್ನು ಹೇಳುವುದಾದರೆ, ನಾನು ಇದನ್ನು ಉತ್ಪ್ರೇಕ್ಷೆಯಿಂದ ಹೇಳುತ್ತಿಲ್ಲ. ನನಗೆ ಅನೇಕ ದಿವಸಗಳಿಂದ ಕಾಯಿಲೆ ಇದ್ದುದರಿಂದ ಒಬ್ಬ ಆಯುರ್ವೇದ ಪಂಡಿತನ ಹತ್ತಿರ ಹೋಗಿದ್ದೆ ಅದಕ್ಕೆ ಅವನು ತಲೆ ಬೋಳಿಸಿಕೊಂಡು ಬನ್ನಿ ಎಂದು ಹೇಳಿದ. ಅದೇ ರೀತಿ ನಾನು ತಲೆ ಬೋಳಿಸಿ ಕೊಂಡೆ, ಆ ಮೇಲೆ ಟೋಪಿ ಹಾಕಿಕೊಳ್ಳಬೇಕಾಗಿ ಬಂತು, ಅವನು ಏನೋ ಔಷಧಿ ಕೊಟ್ಟ ಆದರೂ ನನ್ನ ಕಾಯಿಲೆ ಗುಣವಾಗಲಿಲ್ಲ. ೫ ಸಾವಿರ ರೂಪಾಯಿಗಳನ್ನು ಕೊಟ್ಟರೆ ವಾಸಿ ಮಾಡುತ್ತೇನೆಂದು ಹೇಳಿದ್ದ. ಇಷ್ಟು ಹಣವನ್ನು ಅವನು ನನ್ನಿಂದ ತೆಗೆದುಕೊಂಡು ನನಗೆ ತಲೆ ಬೋಳಿಸಿ ಬಿಟ್ಟ. ಹೀಗೆ ಆಯುರ್ವೇದಿಕ್ ಮೆಡಿಸನ್‌ನಲ್ಲಿ ಸಾವಿರ ಗಟ್ಟಲೆ ರೂಪಾಯಿಗಳ ಔಷಧಿಯನ್ನು ಕೊಡುತ್ತಿರುವಾಗ ಅದನ್ನು ಇದರಲ್ಲಿ ಏತಕ್ಕೆ ಸೇರಿಸದೇ ಬಿಟ್ಟಿದ್ದೀರಿ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ೫ ಸಾವಿರ ರೂಪಾಯಿಗಳನ್ನು ಕೊಟ್ಟು ತಲೆ ಬೋಳಿಸಿಕೊಂಡಿದ್ದು ಆಯಿತು.

ಇನ್ನು "Private Nursing Home to be licensed" ಎನ್ನುವುದರಲ್ಲಿ ಅನೇಕ ಏರಿಯಾಗಳನ್ನು ಕೊಟ್ಟಿದ್ದೀರಿ. ಇವತ್ತು ನಿಮ್ಮ ಮಸೂದೆ ಏನೋ ನೋಡುವುದಕ್ಕೆ ಚಿಕ್ಕದು ಆಗಿದೆ. ಅದರ ವಿಸ್ತೀರ್ಣ ಮತ್ತು ಪ್ರಭಾವ ಬಹಳ ಜಾಸ್ತಿಯಾಗಿದೆ. ಇನ್ನು ತಮ್ಮ ರೆಗ್ಯುಲರೈಜೇಷನ್ ಮತ್ತು ರೂಲ್ಸ್‌ನ್ನು ನೋಡಿದರೆ ಗೊತ್ತಾಗುತ್ತದೆ ಆದರಲ್ಲಿ ಸ್ಟ್ಯಾಂಡರ್ಡ್ ಮೇನ್‌ಟೇನ್ ಮಾಡುವುದರಲ್ಲಿ ಶೆಡ್ಯೂಲ್ ೧ ಮತ್ತು ೨ರಲ್ಲಿ ೧ ರಿಂದ ೨೫ರ ವರೆಗೆ ಬೆಡ್ ಇದ್ದರೆ ೨ ಡಾಕ್ಟರ್‌ಗಳು, ೨೫ ರಿಂದ ೪೦ರ ವರೆಗೆ ಬೆಡ್ ಇದ್ದರೆ ೪ ಜನ ಡಾಕ್ಟರ್‌ಗಳು ಮತ್ತು ೪೦ ರಿಂದ ಮುಂದಕ್ಕೆ ಜಾಸ್ತಿ ಬೆಡ್‌ಗಳಿದ್ದರೆ ಅಡಿಷನಲ್ ಡಾಕ್ಟರ್‌ಗಳು ಇರಬೇಕೆಂದು ಕೊಟ್ಟಿದ್ದೀರಿ. ಆದರೆ ಇದೇ ರೀತಿ ಸರ್ಕಾರಿ ಆಸ್ಪತ್ರೆಗಳಲ್ಲಿಯೂ ಇದೆಯೇ ಎಂಬುದನ್ನು ತಾವು ನೋಡಬೇಕು.

ಇನ್ನು ಅನೇಕ ಸರ್ಕಾರಿ ಡಾಕ್ಟರ್‌ಗಳು ಪ್ರೈವೇಟ್‌ನಲ್ಲಿ ಕೆಲಸ ಮಾಡುತ್ತಾರೆ. ಅವರಿಗೆ ಪ್ರೈವೇಟ್ ಡಾಕ್ಟರ್‌ಗಳು ಇಷ್ಟು ಕೊಟ್ಟಿದ್ದೇವೆ ಅಷ್ಟು ಕೊಟ್ಟಿದ್ದೇವೆಂದು ಸುಳ್ಳು ಕಾಗದ ಪತ್ರಗಳನ್ನು ಇಟ್ಟಿರುತ್ತಾರೆ.

SRI H.M CHANNABASAPPA.—If any Government Doctor were to go and function there, he willl lose his job and go home. What the Hon'ble Member is saying is all old story and that is all stopped.

SRI T. R. SHAMANNA.—I am only asking the Hon;ble Minister to see that this loophole is plugged. ಮಾನ್ಯ ಚನ್ನಬಸಪ್ಪನವರು ಎಲ್ಲಿಯೋ ಇರಲಿ ಅಲ್ಲಿ ಎಲ್ಲಾ ಕೆಲಸಗಳೂ ಸರಿಹೋಗುತ್ತವೆ ಇನ್ನು ಪ್ರೈವೇಟ್ ನರ್ಸಿಂಗ್ ಹೋಂ ನಲ್ಲಿ ಹೀಗೆ ಹೀಗೆ ಇರಬೇಕೆಂದು ಏನೋ ಹೇಳಿದ್ದೀರಿ ಆದರೆ ಅಲ್ಲಿ ಕೆಲಸ ಮಾಡತಕ್ಕಂಥವರ ಸಂಬಳ ಸಾರಿಗೆಗಳ ಬಗ್ಗೆ ಯಾವ ಕಂಡೀಷನ್ ಹಾಕಿಲ್ಲ.

SRI H. M, CHANNABASAPPA.—They are covered under a different Law.

ಶ್ರೀ ಟಿ. ಆರ್. ಶಾಮಣ್ಣ.—ಆ ಮೇಲೆ ತಾವು ಅಕಾಮಡೇಷನ್ ಬಗ್ಗೆ ಹೇಳಿದ್ದೀರಿ. ವಾರ್ಡ್ ಹೀಗಿರಬೇಕು, ಆಪರೇಷನ್ ಥಿಯೇಟರ್ ಹೀಗಿರಬೇಕು, ಲ್ಯಾಬೋರೇಟರಿ ರೂಂ, ಕಾಟ್, ಕಾಟಿನ ಪಕ್ಕದಲ್ಲಿ ಚಿಕ್ಕ ಟೇಬಲ್, ಅದಕ್ಕೆ ಬೀಗ ಇರಬೇಕು ಮತ್ತೆ ರೋಗಿಗಳಿಗೆ ಕುಡಿಯಲು ಗ್ಲಾಸ್ ಇರಬೇಕೆಂದೆಲ್ಲಾ ಹೇಳಿದ್ದೀರಿ ಅದು ಏನೋ ಸರಿ. ಪ್ರೈವೇಟ್ ನರ್ಸಿಂಗ್ ಹೋಂನಲ್ಲಿಯೇನೋ ಆ ರೀತಿ ಇಟ್ಟಿರುತ್ತಾರೆ. ಆದರೆ ನಿಮ್ಮ ಸರ್ಕಾರಿ ಆಸ್ಪತ್ರೆಗಳನ್ನೂ ಕೂಡ ಅದಕ್ಕೆ ಕಂಪೇರ್ ಮಾಡಿ ನೋಡಿ ಎಂದು ಹೇಳುವುದಕ್ಕೆ ಇಷ್ಟಪಟ್ಟು ಅದನ್ನು ಕೂಡ ತಾವು ಸರಿಪಡಿಸಬೇಕೆಂದು ಹೇಳುತ್ತೇನೆ.

Nursing home means a hospital or a clinic or any other place where human diseases are given preventive and/or curative medical treatment; ಕೆಲವು ವೈದ್ಯರುಗಳು ಅನೇಕ ದಿವಸಗಳಿಂದ ರೋಗಿಗಳ ವಿಶ್ವಾಸವನ್ನು ಗಳಿಸಿ, ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ. ಉದಾಹರಣೆಗೆ: ಡಾ: ಸರ್.ಎಂ. ವಿಶ್ವೇಶ್ವರಯ್ಯನವರು ಏನಾದರೂ ಕಾಯಿಲೆ ಬಿದ್ದರೆ, ಡಾಕ್ಟರ್ ನಂಜಪ್ಪನವರನ್ನೇ ಔಷಧಿ ಕೊಡಲು ಕರೆಯುತ್ತಿದ್ದರು. ಆದರೆ, ಆ ಡಾ: ನಂಜಪ್ಪನವರು ಮಾಡಿದ್ದು ಎಲ್.ಎಂ.ಪಿ. ಹೀಗೆ ಹಲವಾರು ವೈದ್ಯರುಗಳು ಫ್ಯಾಮಿಲಿ ಅಟ್ಯಾಚ್‌ಮೆಂಟ್ ಇಟ್ಟುಕೊಂಡಿರುತ್ತಾರೆ. ಆದುದರಿಂದ, ರೋಗಿಯು ಮತ್ತು ವೈದ್ಯರ ಈ ರೀತಿಯಾದ ಬಾಂಧವ್ಯವನ್ನು ತೆಗೆದುಹಾಕಬೇಡಿ ಎನ್ನುವುದು, ನನ್ನ ಕೋರಿಕೆ.

ಶ್ರೀ ಎಚ್.ಎಂ. ಚನ್ನಬಸಪ್ಪ.—ರೋಗಿ ತನಗೆ ಇಷ್ಟಬಂದ ವೈದ್ಯರ ಹತ್ತಿರ ಹೋಗಬಹುದು.

ಶ್ರೀ ಟಿ. ಆರ್. ಶಾಮಣ್ಣ.—ವೈದ್ಯರುಗಳನ್ನು, ಹಳ್ಳಿಗಳ ಕಡೆಗೆ ಹೋಗಿ ಅಲ್ಲಿ ಸೇವೆ ಮಾಡಬೇಕೆಂದು ಸರ್ಕಾರದವರು ಒತ್ತಾಯ ಮಾಡುತ್ತಿದ್ದಾರೆ. ಆದರೆ, ಸರ್ಕಾರದವರಿಗೆ ಸಣ್ಣ ಸಣ್ಣ ಕ್ಲಿನಿಕ್‌ಗಳ ಮೇಲೆ ಸ್ವಲ್ಪ ಕನಿಕರವಿರಬೇಕಾಗುತ್ತದೆ ಹಳ್ಳಿಗಳಲ್ಲಿ ಸೌಲಭ್ಯಗಳು ಸರಿಯಾಗಿಲ್ಲದಿರುವುದರಿಂದ, ಅಲ್ಲಿಗೆ ಯಾರೂ ಹೋಗುವುದಕ್ಕೆ ಬಯಸುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಕ್ಲಿನಿಕ್‌ಗಳಲ್ಲಿರಬೇಕಾದ ಮಿನಿಮಮ್ ರಿಕ್ವಯರ್‌ಮೆಂಟ್ಸ್ ಇರಬೇಕೋ ಬೇಡವೊ? ಅದೂ ಇಲ್ಲದಿದ್ದರೆ, ರೋಗಿ, ಕಾಸೂ ಕೊಟ್ಟು ತಲೆ ಬೋಡು ಮಾಡಿಸಿಕೊಂಡು ಹೋಗಬೇಕೇ ?

80 percent of doctors are in cities. They are here to serve 20 percent of the population. The position is different from what you are saying.

ಶ್ರೀ ಕಾಗೋಡು ತಿಮ್ಮಪ್ಪ.—ಹಳ್ಳಿಗಳಿಗೆ ಹೋಗಿ ಸೇವೆ ಮಾಡದಂಥ ವೈದ್ಯರುಗಳನ್ನು ನೀವು ಏತಕ್ಕೆ ಮನೆಗೆ ಕಳುಹಿಸುವುದಿಲ್ಲ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಏತಕ್ಕೆ ಕಳುಹಿಸಿಲ್ಲ, ಎಷ್ಟೋ ಇಂಥಾ ಜನರನ್ನು ಕಳುಹಿಸಿದ್ದೇವೆ.

ಶ್ರೀ ಹೆಚ್. ಡಿ. ದೇವೇಗೌಡ —ನೀವು ಯಾರು ಯಾರನ್ನೋ ಕಳುಹಿಸುತ್ತಿದ್ದೀರಿ, ನಿಮ್ಮನ್ನು ಯಾರು ಯಾರು ಕಳುಹಿಸುತ್ತಾರೋ ನೋಡೋಣ.

ಶ್ರೀ ಟಿ. ಆರ್. ಶಾಮಣ್ಣ.—ಅನೇಕ ವರ್ಷಗಳಿಂದ, ಸೇವೆ ಮಾಡಿಕೊಂಡು ಬಂದಿರುವ ಹಳೇ ಆಸ್ಪತ್ರೆಗಳನ್ನೂ ಮತ್ತು ಹಳೇ ಕ್ಲಿನಿಕ್‌ಗಳನ್ನೂ-ಹೀಗೆ ದಿಢೀರ್ ಕಾಯಿದೆ ತರುವುದರ ಮುಖಾಂತರ ಮುಚ್ಚುವುದಕ್ಕೆ ಹೋಗಬೇಡಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಆಮೇಲೆ, ಇಲ್ಲಿ ವೈದ್ಯ ಸೇವೆಗಾಗಿ ಗೊತ್ತು ಮಾಡಿರುವ ಬೆಲೆಗಳನ್ನು ಗಮನಿಸುವುದಾದರೆ, ಜನರಲ್ ಸರ್ಜರಿಗೆ ಕೊಟ್ಟಿರತಕ್ಕ ರೇಟು ಬಹಳ ಕಡಮೆ ಇದೆ. ಆದರೆ, ಮೈನರ್ ಆಪರೇಷನ್‌ಗೆ ಮತ್ತು ರಿಮೂವಲ್ ಆಫ್ ಫಾರಿನ್ ಬಾಡೀಸ್‌ಗೆ ೧೫ ರೂಪಾಯಿ ಎಂದು ನಿಗದಿ ಮಾಡಿದ್ದಾರೆ.

ಶ್ರೀ ಎಚ್.ಎಂ. ಚನ್ನಬಸಪ್ಪ.—ಖಾಸಗಿ ನರ್ಸಿಂಗ್ ಹೋಮಿನ ವೈದ್ಯರುಗಳನ್ನು ಕನ್ಸಲ್ಟ್ ಮಾಡಿ ಈ ರೇಟುಗಳನ್ನು ನಿಗದಿ ಮಾಡಿದ್ದೇವೆ. ಇದಕ್ಕೆ ಅವರೂ ಕೂಡ ಒಪ್ಪಿಕೊಂಡಿದ್ದಾರೆ. ಅವರೇ ಸರಿ ಎಂದು ಹೇಳುತ್ತಿರುವಾಗ, ನೀವು ಮಾತ್ರ ಕಡಮೆಯಾಯಿತು ಎಂದು ಹೇಳುತ್ತಿದ್ದೀರಿ. ಮುಂದೆ ಏನಾದರೂ ಹೆಚ್ಚು ಕಡಮೆ ಮಾಡೋಣವೆಂದರೆ, ಅದಕ್ಕೆ ಒಂದು ಸಮಿತಿ ಮಾಡುತ್ತೇನೆ. ಇದರಲ್ಲೇನೂ ಅಡ್ಡಿಯಿಲ್ಲ.

ಶ್ರೀ ಟಿ.ಆರ್. ಶಾಮಣ್ಣ.—ಹೊಟ್ಟೆ ಕೊಯ್ಯುವುದಕ್ಕೂ ೪೦೦ ರೂಪಾಯಿ ನಿಗದಿ ಮಾಡಿದ್ದಾರೆ, ಕಣ್ಣು ಕೊಯುವುದಕ್ಕೂ ೪೦೦ ರೂಪಾಯಿ ಮಾಡಿದ್ದಾರೆ.

SRI H.M. CHANNABASAPPA.—These are all technical matters on which I and you cannot sit settle. If you think that there is variations and requires revision, I have no objection.

SRI T.R. SHAMANNA.—I am just telling that there are lot of anomalies. I request you to set it right before a final decision is taken. This should be given top priority so that patients will not be asked to pay more than what is required. ಇನ್ನು ಬ್ಲಡ್ ಟೆಸ್ಟಿಗೆ ವಿಪರೀತ ಹೆಚ್ಚು ನಿಗದಿ ಮಾಡಿದ್ದಾರೆ. ಐದು ರೂಪಾಯಿ ಇದ್ದುದನ್ನು ೯-೧೦ ರೂಪಾಯಿಗೆ ಏರಿಸಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದನ್ನು ನಾವು ನಿಗದಿಮಾಡಿರುವುದಿಲ್ಲ. ಇದರಲ್ಲಿ ಪೈಪೋಟಿ ಇರುತ್ತದೆ. This is only a ceiling. If the man is prepared to do for reduced rate, we have no objection. We left it to them.

ಶ್ರೀ ಟಿ. ಆರ್. ಶಾಮಣ್ಣ.—ಆದರೆ, ಜನರಲ್ ಸರ್ಜರಿ ಮತ್ತು ಹೆರಿಗೆ ಸೌಲಭ್ಯ-ಈ ಎರಡಕ್ಕೆ ಕಡಮೆ ಮಾಡಿ, ಉಳಿದುದಕ್ಕೆ ಜಾಸ್ತಿ ಮಾಡಿದ್ದಾರೆ. ವಿ.ಡಿ.ಆರ್.ಗೆ ಆರು ರೂಪಾಯಿ ಇದ್ದುದು ಈಗ ೧೫ ರೂಪಾಯಿ ಎಂದು ಮಾಡಲಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ನಿಗದಿ ಮಾಡಿರುವುದು ಪರಮಾವಧಿಯ ಬೆಲೆ. ಈಗ ಒಬ್ಬ ವೈದ್ಯನು ಒಂದು ಚಿಕಿತ್ಸೆಗೆ ಹತ್ತು ರೂಪಾಯಿಗಳನ್ನು ವಸೂಲು ಮಾಡಿದ್ದರೆ, ಇನ್ನೊಬ್ಬ ವೈದ್ಯ ಅದೇ ಚಿಕಿತ್ಸೆಗೆ ಐದು ರೂಪಾಯಿ ತೆಗೆದುಕೊಳ್ಳುತ್ತಾನೆ ಎಂದು ಇಟ್ಟುಕೊಳ್ಳೋಣ. ಸ್ವಾಭಾವಿಕವಾಗಿ, ಜನರೆಲ್ಲರೂ ಐದು ರೂಪಾಯಿ ತೆಗೆದುಕೊಂಡು ಚಿಕಿತ್ಸೆ ಮಾಡುವವನ ಹತ್ತಿರವೇ ಹೋಗುವುದಿಲ್ಲವೇ?

ಶ್ರೀ ಟಿ. ಆರ್. ಶಾಮಣ್ಣ.—ಪರಮಾವಧಿ ಬೆಲೆಯನ್ನು ನಿಗದಿ ಮಾಡಿರುವುದನ್ನು ನಾನು ಒಪ್ಪುತ್ತೇನೆ. ಆದರೆ, ಕನ್ಸಲ್ಟೇಷನ್‌ಗೆ ೧೫ ರೂಪಾಯಿ ಇದ್ದುದನ್ನು ೩೦ ರೂಪಾಯಿ ಮಾಡಿದ್ದಾರೆ. ಹೀಗೆ, ನಿಗದಿ ಮಾಡಿರುವ ಬೆಲೆಗಳಲ್ಲಿ ಬಹಳ ವ್ಯತ್ಯಾಸಗಳು ನನಗೆ ಕಂಡುಬರುತ್ತಿವೆ. ಆದುದರಿಂದ, ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಸಾರ್ವಜನಿಕರಿಗೆ ತೊಂದರೆಯಾಗುವಷ್ಟು ರೇಟುಗಳನ್ನು ಹೆಚ್ಚು ಮಾಡಿ, ಅವರಿಗೆ ತೊಂದರೆ ಕೊಟ್ಟು, ಅವರಿಂದ ಹಣ ವಸೂಲಿ ಮಾಡುವ ವಿಚಾರದಲ್ಲಿ ನಾನು ಯಾವತ್ತೂ ಭಾಗಿಯಲ್ಲ. ನ್ಯಾಯವಾಗಿ ಎಷ್ಟನ್ನು ವಸೂಲಿ ಮಾಡಬೇಕೋ ಅಷ್ಟನ್ನು ಮಾತ್ರ ಮಾಡಬೇಕು. ಇತ್ತ ಕಡೆ ಸರ್ಕಾರೀ ಆಸ್ಪತ್ರೆಗಳಲ್ಲಿ ಹೆಚ್ಚು ಸೌಲಭ್ಯಗಳು ದೊರಕುವುದಿಲ್ಲ, ಅತ್ತ ಕಡೆ ನರ್ಸಿಂಗ್ ಹೋಂಗಳಿಗೂ ಹೋಗುವುದಕ್ಕಾಗುವುದಿಲ್ಲ-ಅಂತಹ ಪರಿಸ್ಥಿತಿಯಲ್ಲಿ ತಂದು ಸಾರ್ವಜನಿಕರನ್ನು ಕೂರಿಸಬೇಡಿ ಎಂದು ಹೇಳಿ, ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶಿರಾಳಿ ಚಂದ್ರಶೇಖರ್ (ಹೊಸನಗರ)—ಸನ್ಮಾನ್ಯ ಉಪಾಧ್ಯಕ್ಷರೇ, ಇತ್ತೀಚಿನ ದಿವಸಗಳಲ್ಲಿ ಬಂದಿರತಕ್ಕ ಶಾಸನದಲ್ಲಿ, ನಾನು ಇದಕ್ಕೆ ಅತ್ಯಂತ ಬೆಲೆ ಕಟ್ಟುತ್ತೇನೆ ಮತ್ತು ಇದನ್ನು ನಾನು ಅಗ್ರಮಾನ್ಯ ಪಂಕ್ತಿಯಲ್ಲಿಡುತ್ತೇನೆ. ಇಂಥಾ ಒಂದು ಶಾಸನ ಎಂದೋ ಬರಬೇಕಾಗಿತ್ತು. ಇಂದು ಬಂದಿದೆ. ಇದರ ಕೀರ್ತಿ ಸನ್ಮಾನ್ಯ ಚನ್ನಬಸಪ್ಪನವರಿಗೆ ಸಂದಾಯವಾಗಿದೆ ಎಂದರೆ ನನಗೆ ಹೊಟ್ಟೆ ಕಿಚ್ಚಾಗುತ್ತಿದೆ! ಇವತ್ತು ಖಾಸಗೀ ನರ್ಸಿಂಗ್ ಹೋಂಗಳಲ್ಲಿ ನಡೆಯುತ್ತಿರುವ ಅನಾಚಾರ-ಚರಿತ್ರೆ ಹೇಳಿದಷ್ಟೂ ಇದೆ.

ಯಾವ ನಿಯಂತ್ರಣವೂ ಇಲ್ಲದೆ, ಈ ನರ್ಸಿಂಗ್‌ಹೋಂಗಳನ್ನು ಯಾರು ಬೇಕಾದರೂ ಎಲ್ಲಿ ಬೇಕಾದರೂ ಪ್ರಾರಂಭ ಮಾಡಬಹುದು, ಯಾರಿಗೂ ಕೇಳುವಂತಿಲ್ಲ. ಇದಕ್ಕೆ ಯಾರು ಲೈಸೆನ್ಸ್ ಕೊಡುತ್ತಾರೋ ನನಗಂತೂ ಗೊತ್ತಿಲ್ಲ. ನಿಜವಾಗಿಯೂ ಹೇಳುವುದಾದರೆ, ಈ ಸ್ಲಂ ಏರಿಯಾಗಳಲ್ಲಿ ಯಾವ ನರ್ಸಿಂಗ್ ಹೋಂಗಳನ್ನು ಮಾಡಿದ್ದಾರೆ. ಶಿವಮೊಗ್ಗದಲ್ಲಿ ಶಾರದ ಕ್ಲಿನಿಕ್ ಎಂದು ಇದೆ, ಇದಕ್ಕೆ ಯಾರು ಲೈಸೆನ್ಸ್ ಕೊಟ್ಟರೋ, ಅಲ್ಲಿ ಒತ್ತೊತ್ತಾಗಿ ಮನೆಗಳು ಇವೆ, ಎಲ್ಲಿ ನೋಡಿದರೂ ಗಾಳಿ ಇಲ್ಲ, ಅಂಥ ಜಾಗದಲ್ಲಿ ನರ್ಸಿಂಗ್ ಹೋಂ ಅನ್ನು ಇಟ್ಟುಕೊಂಡಿದ್ದಾರೆ: ಇವರಿಗೆ ಯಾರೂ ಹೇಳುವವರೂ ಇಲ್ಲ ಕೇಳುವವರೂ ಇಲ್ಲ. ಈಗ ಮಾನ್ಯ ಮಂತ್ರಿಗಳು ಇದರ ಮೂಲಕ ಒಂದು ನಿಯಂತ್ರಣವನ್ನು ತಂದಿದ್ದಾರೆ ಇದರಿಂದ ಸ್ವಲ್ಪ ಸುಧಾರಣೆಯಾಗಬಹುದು ಎನ್ನುವ ಆಶಾಭಾವನೆಯನ್ನು ನಾನು ಇಟ್ಟುಕೊಂಡಿದ್ದೇನೆ. ಬೆಂಗಳೂರಿನಲ್ಲಿಯೂ ನಾವು ಒಂದೊಂದು ಖಾಸಗಿ ನರ್ಸಿಂಗ್‌ಹೋಂಗೆ ಹೋದರೆ ಮುಖ ನೋಡಿದರೆ ೨೫ ರೂಪಾಯಿ ಮೈ ಮುಟ್ಟಿದರೆ ೪೦ ರೂಪಾಯಿಗಳನ್ನು ಚಾರ್ಜ್ ಮಾಡುತ್ತಾರೆ. ಇದನ್ನು ನಾವು ಡಾಕ್ಟರ್ ಅವರ ಕೈಯಲ್ಲಿ ಕೊಡುವಂತಿಲ್ಲ, ಬಾಗಿಲ ಹತ್ತಿರ ಕೂತಿರತಕ್ಕಂಥ ರಿಸೆಪ್ಷನಿಸ್ಟ್‌ಗೆ

ಕೊಡಬೇಕು. ಇಂಥ ಒಂದು ಕೆಲಸ ನಡೆಯುತ್ತದೆ, ಇದನ್ನು ತಡೆಗಟ್ಟದೇ ಹೋದರೆ ಗತ್ಯಂತರವಿಲ್ಲ, ನಂತರ ಒಂದೊಂದು ಆಪರೇಷನ್ ಮಾಡಿದರೆ ಅವರು ಮಾಡತಕ್ಕ ಚಾರ್ಜಸ್‌ಅನ್ನು ನೋಡಿದರೆ ಅದು ೫ರಿಂದ ೧೦ ಸಾವಿರ ರೂಪಾಯಿಗಳವರೆಗೂ ಹೋಗುತ್ತದೆ. ಇದನ್ನು ಕೊಡಬೇಕಾದರೆ ನಾವು ಯಾರಿಗಾದರೂ ತಲೆ ಹೊಡೆದು ಸಂಪಾದನೆ ಮಾಡಿ ಕೊಡಬೇಕು. ಮಾನ್ಯ ಮಂತ್ರಿಗಳಿಗೆ ಈ ಬಗ್ಗೆ ಪರಿಚಯು ಇರಬಹುದು. ಇನ್ನು ಖಾಸಗೀ ವೈದ್ಯರು ಸಂಪಾದನೆ ಮಾಡಿರತಕ್ಕ ದುಡ್ಡನ್ನು ನೋಡಿದರೆ ಅದು ಹತ್ತಾರು ಲಕ್ಷಕ್ಕಿಂತ ಕಡಿಮೆಯಿಲ್ಲ. ಬೆಂಗಳೂರಿನಲ್ಲಿ ಒಬ್ಬರ ವೈದ್ಯರ ಮನೆಯಲ್ಲಿ ಸುಮಾರು ೩೫ ಲಕ್ಷ ರೂಪಾಯಿಗಳ ಹಣ ಸಿಕ್ಕಿತು ಎಂದು ನಾವೆಲ್ಲ ಪೇಪರ್‌ಗಳಲ್ಲಿ ಓದಿದ್ದೇವೆ. ಇವರ ಸಂಪಾದನೆ ಯಾವ ಆಳತೆಗೋಲಿಗೂ ಸಿಕ್ಕುವುದಿಲ್ಲ. ನಮ್ಮ ಶಿವಮೊಗ್ಗದಲ್ಲಿ ಒಬ್ಬ ಖಾಸಗೀ ವೈದ್ಯರು ರೋಗಿಗಳ ತಲೆದಿಂಬುಗಳಲ್ಲಿ ಹಣವನ್ನು ಬಚ್ಚಿಟ್ಟು ಅದು ಬೆಳಕಿಗೆ ಬಂದ ಸಮಾಚಾರ ಮತ್ತು ಅದನ್ನು ಸೀಸ್ ಮಾಡಿ ತೆಗೆದುಕೊಂಡಿರತಕ್ಕುದನ್ನು ನಾವು ಕೇಳಿದ್ದೇವೆ. ಇದು ಸುಳ್ಳು ಇರಬಹುದು ಅಥವಾ ಸತ್ಯ ಇರಬಹುದು ಅದರ ಪರಿಶೀಲನೆಗೆ ನಾನು ಹೋಗುವುದಿಲ್ಲ, ಆದರೆ ಈ ಜನರ ದುಡಿಮೆ ಯಾವ ಅಳತೆಗೋಲಿಗೂ ಸಿಕ್ಕುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಶಿವಮೊಗ್ಗದಲ್ಲಿ ಇದು ಯಾರ ನರ್ಸಿಂಗ್ ಹೋಂಗೆ ಸಂಬಂಧಪಟ್ಟಿದ್ದು?

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್ —ನಾನು ಅವರ ಹೆಸರು ಹೇಳಬಾರದು.

ಶ್ರೀ ಕೋಣಂದೂರು ಲಿಂಗಪ್ಪ.—ಆ ವ್ಯಕ್ತಿಯ ಹೆಸರಲ್ಲ, ನರ್ಸಿಂಗ್ ಹೋಂ ಹೆಸರು ಕೇಳಿ ?

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್.—ಯಾವುದನ್ನೂ ಹೇಳುವುದಿಲ್ಲ. ಏಕೆ ಹೇಳಬೇಕು ? ಇವತ್ತಿನ ದಿವಸಗಳಲ್ಲಿ ಇಂಥ ಖಾಸಗಿ ಸಂಸ್ಥೆಗಳನ್ನು ಸಂಪೂರ್ಣವಾಗಿ ಜನ ನಿಯಂತ್ರಣ ಮಾಡತಕ್ಕ ಅಂದರೆ ರಾಷ್ಟ್ರೀಕರಣ ಮಾಡತಕ್ಕ ಪ್ರವೃತ್ತಿ ಇರುವಾಗ ಇಂಥ ಶಾಸನ ಬರುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ. ಅದರಲ್ಲಿಯೂ ಕೂಡ ಕೆಲವು ದೃಷ್ಟಿಕೋಣದಿಂದ ಇವರ ಮೇಲೆ ಹತೋಟಿಯನ್ನು ಸಂಪೂರ್ಣವಾಗಿ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಇದರಲ್ಲಿ ಅವರು ತಪ್ಪಿಸಿಕೊಳ್ಳುವುದಕ್ಕೆ ಅನೇಕ ಮಾರ್ಗಗಳು ಇವೆಯೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಶಾಮಣ್ಣನವರು ಮಾತನಾಡುತ್ತಾ, ಸರ್ಕಾರಿ ಆಸ್ಪತ್ರೆಗಳ ಬಗ್ಗೆ ಸಾಕಷ್ಟು ಹೇಳಿದರು. ನಾನು ಸರ್ಕಾರಿ ಆಸ್ಪತ್ರೆಗಳಲ್ಲಿ ನ್ಯೂನತೆ ಇಲ್ಲವೆಂದು ಹೇಳುವುದಿಲ್ಲ. ಇಲ್ಲಿಯೂ ನ್ಯೂನತೆ ಇರಬಹುದು, ಇಲ್ಲಿ ನ್ಯೂನತೆ ಇದೆಯೆಂದ ಮಾತ್ರಕ್ಕೆ ಈ ಬಿಲ್ಲನ್ನು ಸರಿಯಾಗಿಲ್ಲವೆಂದು ಹೇಳುವುದು ಬುದ್ಧಿವಂತರ ಲಕ್ಷಣವಲ್ಲ.

SRI T.R. SHAMANNA.—I never said that control is not necessary. I am sorry the Hon'ble. member is misquoting me.

SRI H. M. CHANNABASAPPA.–I am happy you have been supporting the Bill.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಸ್ನೇಹಿತರ ಕಿವಿಯನ್ನು ಪರೀಕ್ಷೆ ಮಾಡಿಸಬೇಕಾಗುತ್ತದೆ.

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್.—ಬಿಲ್ಲಿನಲ್ಲಿ ಕ್ಲಾಸ್ ೭ರ ಕೊನೆಯಲ್ಲಿ "ಲೈಸೆನ್ಸ್ ಷಲ್ ಬಿ ಡೀಮ್ಡ್ ಟು ಹ್ಯಾವ್‌ಬೀನ್ ರೆಫ್ಯೂಸ್ಡ್ ಎಂದು" ಇದೆ. ಅರ್ಜಿಯನ್ನು ಹಾಕಿದ ಇಂತಿಷ್ಟು ದಿವಸದಲ್ಲಿ ಲೈಸೆನ್ಸ್ ಕೊಡಬೇಕಾಗಿದ್ದರೆ, "ಡೀಮ್ಡ್ ಟು ಹ್ಯಾವ್‌ಬೀನ್ ಗ್ರಾಂಟೆಡ್" ಎಂದು ಇರಬೇಕಾಗಿತ್ತು. ಕಾನೂನು ತಜ್ಞರು ಇದನ್ನು ಪರಿಶೀಲನೆ ಮಾಡಬೇಕಾಗುತ್ತದೆ.

It is not a correct version in any enactment. If you find it is correct, it may be corrected. ಮಾನ್ಯ ಶಾಮಣ್ಣನವರು ಈ ಶಾಸನವನ್ನು ಬಹಳ ತರಾತುರಿಯಿಂದ ತಂದಿದ್ದಾರೆಂದು ಹೇಳಿದರು. ಇದು ಬರಬಾರದು ಎಂದು ಹೇಳುವುದಕ್ಕೆ ಅವರಿಗೆ ಕಷ್ಟವಾಗುತ್ತದೆ. ಇಡೀ ದೇಶದಲ್ಲಿ ಒಂದು ರೀತಿಯಲ್ಲಿ ಸಾಧಾರಣೆಯಾಗುತ್ತಾ ಇರುವಾಗ ಒಬ್ಬರು ಮಾತ್ರ ಈ ರೀತಿ ಹೇಳಿದರು ಎಂದರೆ ಸರಿಯಾಗುವುದಿಲ್ಲ ಎನ್ನುವುದು ಮಾನ್ಯ ಶಾಮಣ್ಣನವರ ಥಿಯರಿ, ಈ ವಾದವನ್ನು ನಾವು ಒಪ್ಪುವುದಕ್ಕೆ ಸಾಧ್ಯವಿಲ್ಲ. ಇಂಥ ಶಾಸನಗಳ ಅವಶ್ಯಕತೆ ಬಹಳ ಇದೆ.

Sri T.R. Shamanna.—I am sorry. I was saying that it should not have been brought in the form of ordinance. It could have been brought in the form of a Bill.

ಶ್ರೀ ಎಸ್. ಎಂ ಶೀರನಾಳಿ ಚಂದ್ರಶೇಖರ್ —ಈ ಶಾಸನದಲ್ಲಿ ಇನ್ನೂ ಕೆಲವು ಅಂಶಗಳನ್ನು ಅಳವಡಿಸಬೇಕು ಎಂದು ನಾನು ಹೇಳುತ್ತೇನೆ. ನಿಯಂತ್ರಣ ಮಾಡುವಾಗ ಕೊಡತಕ್ಕ ಫೀಸ್‌ಗಳ ಬಗ್ಗೆಯೂ ಲೆಕ್ಕಾಚಾರ ಪ್ರತಿ ಹಂತದಲ್ಲಿಯೂ ಇರಬೇಕಾಗುತ್ತದೆ. ಎಷ್ಟು ಜನ ರೋಗಿಗಳು ಬಂದರು, ಎಷ್ಟು ಹಣ ಬಂತು ಎನ್ನುವುದಕ್ಕೆ ರಸೀತಿ ಮತ್ತು ರಿಜಿಸ್ಟರನ್ನು ಇಡಬೇಕಾಗುತ್ತದೆ. ಈ ರೀತಿಯಾಗಿ ತಾವು ನಿಯಂತ್ರಣವನ್ನು ಸರಿಯಾದ ರೀತಿಯಲ್ಲಿ ಜಾರಿಗೆ ತರಬೇಕಾಗುತ್ತದೆ ಈ ಎಲ್ಲಾ ದೃಷ್ಟಿಯಿಂದ ಮೂಲಭೂತವಾದ ನಿಯಂತ್ರಣ ಬಂದು ಈ ಶಾಸನದ ಉದ್ದೇಶ ಸಫಲವಾಗಲಿ ಎಂದು ಹೇಳಿ, ಅಧ್ಯಕ್ಷರು ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಮಾನ್ಯ ಅಧ್ಯಕ್ಷರೇ. ಕರ್ನಾಟಕ ಪ್ರೈವೇಟ್ ನರ್ಸಿಂಗ್ ಹೋಂ ಬಿಲ್ ಏನು ಇದೆ ಇದರ ಉದ್ದೇಶ ಬಹಳ ಒಳ್ಳೆಯದು ಇದೆ. ಈ ಬಿಲ್ ಬಹಳ ತಡವಾಗಿ ಬಂದಿದೆ ಎಂದು ನಾನು ಹೇಳುತ್ತೇನೆ, ಆದರೂ ಇದರ ಉದ್ದೇಶವನ್ನು ತಿಳಿದು ನಾನು ಸ್ವಾಗತಿಸಬೇಕಾಗುತ್ತದೆ. ಇದಕ್ಕೆ ಮೂಲ ಕಾರಣ ಯಾವುದು, ಪ್ರೈವೇಟ್ ನರ್ಸಿಂಗ್ ಹೋಂಗಳು ಮಷ್ರೂಂ ತರಹ ಬೆಳೆಯುತ್ತಿವೆ, ಇದಕ್ಕೆ ಕಾರಣ ಏನು ಜನಗಳ ಎಕ್ಸ್‌ಪ್ಲಾಯಿಟೇಷನ್ ಏನು ನಡೆಯುತ್ತಿದೆ ಇದಕ್ಕೆ ಕಾರಣ ಏನು? ಇದಕ್ಕೆ ಕಾರಣ ಭೂತರು ಯಾರು ? ಇದಕ್ಕೆ ಸಮಾಜದ ಕೊಳಕೇ ಕಾರಣ ಇರುತ್ತದೆ, ಸಮಾಜದ ಹೊಣೆ ಹೊತ್ತ ಸರ್ಕಾರ ಮೆಡಿಕಲ್ ಕಾಲೇಜುಗಳಿಗೆ ಸೇರಬೇಕಾದರೆ ಕ್ಯಾಪಿಟೇಷನ್ ಫೀ ವಸೂಲು ಮಾಡುವುದನ್ನು ನಿಲ್ಲಿಸಿದೆಯೇ ಎಂದು ನಾನು ಕೇಳಬೇಕಾಗುತ್ತದೆ. ಒಬ್ಬ ಡಾಕ್ಟರ್ ಆಗಲಿಕ್ಕೆ ೭೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದಾಗ, ಅವನು ತನ್ನ ಹೊಲ, ಗದ್ದೆ ಮುಂತಾದುವುಗಳನ್ನು ಇತರರಿಗೆ ಭೋಗ್ಯ ಮಾಡಿ ಡಾಕ್ಟರ್ ಆಗಿರುತ್ತಾನೆ. ಇಂಥವನಿಗೆ ಡಾಕ್ಟರ್ ಜಾಬ್ ಸಿಕ್ಕಬೇಕು, ಇಲ್ಲದೇ ಹೋದರೆ ಅವನು ಪ್ರೈವೇಟ್ ನರ್ಸಿಂಗ್ ಹೋಂ ಅನ್ನು ಓಪನ್ ಮಾಡಬೇಕು. ಒಟ್ಟಿನಲ್ಲಿ ಅವನು ಜನರನ್ನು ಒಂದಲ್ಲ ಒಂದು ರೀತಿ ಚೌರ ಮಾಡಲಿಕ್ಕೆ ಹೊರಡಬೇಕಾಗುತ್ತದೆ. ಇಲ್ಲದೇ ಹೋದರೆ ಅವನು ತನ್ನ ತಂದೆ ತಾಯಿಗಳನ್ನು ಯಾವ ರೀತಿ ಸಾಕುತ್ತಾನೆ ? ಅವನು ಎಕ್ಸ್‌ಪ್ಲಾಯಿಟ್ ಮಾಡುವ ದೃಷ್ಟಿಯನ್ನು ಇಟ್ಟುಕೊಳ್ಳುತ್ತಾನೆಯೇ ಹೊರತು ಸರ್ವಿಸ್ ಮಾಡಬೇಕು ಎನ್ನುವ ಸ್ಪಿರಿಟ್ ಅನ್ನು ಇಟ್ಟುಕೊಳ್ಳುವುದಿಲ್ಲ. ಇಂಥ ಸಮಾಜದ ಕೊಳಕನ್ನು ನೀವು ಉಂಟುಮಾಡಿ, ಇಂಥ ಅನ್ಯಾಯಗಳು ನಡೆದು ಅವನು ಡಾಕ್ಟರ್ ಆಗಿ ಬಂದಮೇಲೆ ಅವನನ್ನು ನೀನು ಹಳ್ಳಿಗೆ ಹೋಗಿ ಜನರ ಸೇವೆಯನ್ನು ಮಾಡು ಎಂದರೆ ಮಾಡುತ್ತಾನೆಯೇ ? ಇದು ನಿಮ್ಮ ಚಾರಿಟಬಲ್ ಅಡ್ವೈಸ್ ಎಂದು ಹೇಳುತ್ತೇನೆ. ಈ ಮೂಲಭೂತವಾದ ತಪ್ಪುಗಳಿಗೆ ತಾವು ಮೊದಲು ಕೊಡಲಿಪೆಟ್ಟನ್ನು ಕೊಟ್ಟರೆ ಒಳ್ಳೆಯದು. ಪ್ರೈವೇಟ್ ಮೆಡಿಕಲ್ ಕಾಲೇಜುಗಳಲ್ಲಿ ಕ್ಯಾಪಿಟೇಷನ್ ಫೀ ಅನ್ನು ತೆಗೆದುಕೊಳ್ಳಕೂಡದು. ಅವರು ತೆಗೆದುಕೊಂಡರೆ ಪರ್ಮಿಷನ್ ಕೊಡುವುದಿಲ್ಲ ಎಂದು ಇದಕ್ಕೆ ಮೊದಲೇ ತಾವು ಕೊಡಲಿಪೆಟ್ಟು ಕೊಟ್ಟಿದ್ದರೆ ಇಂಥ ಅನ್ಯಾಯಗಳು ನಡೆಯುತ್ತಾ ಇರಲಿಲ್ಲ. ಗವರ್ನಮೆಂಟ್ ಆಸ್ಪತ್ರೆಗಳಲ್ಲಿ ಸ್ಟಾಫ್ ಎಷ್ಟು ಇದೆ. ಇವುಗಳು ಮಾದರಿಯಾಗಿ ನಡೆಯುವುದಕ್ಕೆ ಸಾಧ್ಯವಿಲ್ಲವೇ ? ಪ್ರೈವೇಟ್ ನರ್ಸಿಂಗ್ ಹೋಂಗಳಂತೆ ಇವರು ಮಾದರಿಯಾಗಿ ನಡೆಯುವುದಕ್ಕೆ ತಯಾರಾಗಿಲ್ಲ, ಈಗ ಮಂಗಳೂರಿನಲ್ಲಿ ವೆನ್‌ಲಾಕ್ ಹಾಸ್ಪಿಟಲ್ ಇದೆ, ಅಲ್ಲಿ ಕೇರಳದಿಂದ ಬಂದಂಥ ಸ್ಮಗ್ಲರ್ಸ್ ಏನು ಮಾಡುತ್ತಿದ್ದರು ಎನ್ನುವುದು ಅಲ್ಲಿಂದ ಬಂದಂಥ ಸದಸ್ಯರಿಗೆ ಚೆನ್ನಾಗಿ ಗೊತ್ತಿದೆ. ಅದರ ಕಥೆಯೇ ಬೇರೆ. ಅದನ್ನು ಸ್ಮಗ್ಲರ್ಸ್ ತಮ್ಮ ಕಾಂಟ್ಯಾಕ್ಟ್ ಪ್ಲೇಸ್ ಆಗಿ ಉಪಯೋಗಿಸುತ್ತಿದ್ದರು ಎಂದು ಕೆಲವರು ಹೇಳುತ್ತಿದ್ದರು.

5–00 P. M.

ನನಗೆ ಈ ಮನೆಯಲ್ಲಿ ಮಾತನಾಡಲು ಪ್ರಿವಿಲೇಜ್ ಇದೆ ಆದಕಾರಣ ನಾನು ಏನಾದರೂ ಇಲ್ಲಿ ಹೇಳಿದರೆ ಅದರ ಒಂದು ಆಧಾರದ ಮೇಲೆ ತಾವು ನನ್ನ ವಿರುದ್ಧ ಕೋರ್ಟಿನಲ್ಲಿ ಕೇಸ್ ಹಾಕುವುದಕ್ಕೆ ಬರುವುದಿಲ್ಲ ಆದರೆ ದಕ್ಷಿಣಕನ್ನಡ ಜಿಲ್ಲೆಯಿಂದ ಬಂದಿರುವ ಸದಸ್ಯರೆಲ್ಲರಿಗೂ ಅದು ಗೊತ್ತಿದೆ. ಕೆಲವು ನರ್ಸಿಂಗ್ ಹೋಂಗಳಲ್ಲಿರುವ ಡಾಕ್ಟರ್‌ಗಳು ರೋಗಿಗಳ ವಿಚಾರದಲ್ಲಿ ಒಳ್ಳೆಯ ಭಾವನೆ ಇಟ್ಟುಕೊಂಡಿರು

ತ್ತಾರೆ. ಆದರೆ ಅನೇಕ ಕಡೆಗಳಲ್ಲಿ ಈ ಒಂದು ಭಾವನೆ ಇರುವುದಿಲ್ಲ. ಸರ್ಕಾರಿ ಆಸ್ಪತ್ರೆಗಳನ್ನೇ ಸರಿಯಾಗಿ ಇಟ್ಟಿದ್ದರೆ ಜನರು ಖಾಸಗೀ ನರ್ಸಿಂಗ್ ಹೋಂಗಳಿಗೆ ಹೋಗಲು ಇಷ್ಟಪಡುವುದಿಲ್ಲ. ಆದರೆ ಇಂದು ಸರ್ಕಾರೀ ಆಸ್ಪತ್ರೆಗಳಲ್ಲಿ ಸರಿಯಾಗಿ ಔಷಧಗಳೇ ಇರುವುದಿಲ್ಲ ಇದಕ್ಕೆ ಉದಾಹರಣೆ ಕೊಡ ಬೇಕೆಂದರೆ ಫ್ಯಾಮಿಲಿ ಪ್ಲಾನಿಂಗ್‌ಗೆ ಒಳಗಾದವರಿಗೆ ಅಂದರೆ ಆಪರೇಷನ್ ಆದವರಿಗೆ ಒಂದು ವಾರದವರೆಗೆ ಆಂಟಿ-ಬಯಾಟಿಕ್ ಇಂಜಕ್ಷನ್ ಕೊಡಬೇಕೆಂಬ ನಿಯಮವಿದೆ. ಸೆಪ್ಟಿಕ್ ಆಗುವುದು ಬೇಡ ಎಂದು ಈ ರೀತಿ ಇಂಜಕ್ಷನ್ ಕೊಡಲಾಗುತ್ತದೆ. ಆದರೆ ಇಂದು ಕೆಲವು ಕಡೆಗಳಲ್ಲಿ ಇಂಜೆಕ್ಷನ್ ತೆಗೆದುಕೊಳ್ಳಲು ಹೋದರೆ ಅದು ಸ್ಟಾಕ್ ಇರುವುದಿಲ್ಲ; ಮಾತ್ರೆಗಳನ್ನು ಕೊಟ್ಟು ಕಳುಹಿಸುತ್ತಾರೆ ಮತ್ತೆ ಕೆಲವು ಕಡೆಗಳಲ್ಲಿ ೩ ರೂ.ಗಳನ್ನು ಕೊಟ್ಟರೆ ಮಾತ್ರ ಕೊಡುತ್ತೇವೆಂದು ಹೇಳುತ್ತಾರೆ. ದೇಶದಲ್ಲಿ ಇಂದು ಬೆಳೆಯುತ್ತಿರುವ ಜನಸಂಖ್ಯೆಯನ್ನು ತಡೆಗಟ್ಟಬೇಕಾದರೆ ಫ್ಯಾಮಿಲಿ ಪ್ಲಾನಿಂಗ್ ಅತ್ಯಾವಶ್ಯಕವಾಗಿದೆ. ಮತ್ತು ಇದರ ಒಂದು ಉದ್ದೇಶ ಒಳ್ಳೆಯದಿದೆ ಆದರೆ ಸರ್ಕಾರೀ ಆಸ್ಪತ್ರೆಗಳಲ್ಲಿ ಸರಿಯಾಗಿ ನೋಡಿ ಕೊಳ್ಳುವುದಿಲ್ಲವೆಂದು ಖಾಸಗೀ ನರ್ಸಿಂಗ್ ಹೋಂಗಳಿಗೆ ಜನರು ಹೋಗುತ್ತಾರೆ ಈ ರಾಕ್ಷಸರ ಕಾಟ ಬೇಡ ಎಂದುಕೊಂಡು ಆ ಹೊಂಡದಲ್ಲಿ ಈಜಾಡಲು ಹೋಗುತ್ತಾರೆ. ಆದರೆ ಆ ಹೊಂಡದಲ್ಲಿ ಮೊಸಳೆಗಳಿರುತ್ತವೆಂಬುದು ಅವರಿಗೆ ಗೊತ್ತಿರುವುದಿಲ್ಲ. ಜೊತೆಗೆ ಖಾಸಗೀ ನರ್ಸಿಂಗ್ ಹೋಂಗಳಿಗೆ ನಮ್ಮಂಥವರು ಅಥವಾ ತಮ್ಮಂಥವರು ಹೋಗಬಹುದೇ ಹೊರತು ಸಾಮಾನ್ಯ ಜನರು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಆದಕಾರಣ ತಾವು ಸರ್ಕಾರೀ ಆಸ್ಪತ್ರೆಗಳನ್ನು ಮಾದರಿಯಾದಂಥ ಆಸ್ಪತ್ರೆ ಗಳನ್ನಾಗಿ ಪರಿವರ್ತಿಸಿದರೆ ಎಲ್ಲರೂ ಅಲ್ಲಿಗೆ ಹೋಗುತ್ತಾರೆ, ತಾವು ಹೊಸದಾಗಿ ಈ ಇಲಾಖೆಯನ್ನು ವಹಿಸಿಕೊಂಡಿರುವುದರಿಂದ ಈಗಿನ ಒಂದು ವ್ಯವಸ್ಥೆಯನ್ನು ಬದಲಾವಣೆ ಮಾಡುವುದಾಗಿ ನಮಗೆ ತಾವು ಆಶ್ವಾಸನೆಯನ್ನು ಕೊಡಬೇಕು. ಬೆಸ್ಟ್ ಸರ್ವಿಸಸ್ ಅಲ್ಲಿ ಎಲ್ಲರಿಗೂ ಸಿಗುವಂತಹ ಒಂದು ಏರ್ಪಾಡನ್ನು ತಾವು ಮಾಡಿದ್ದೆ ಆದರೆ ಖಾಸಗೀ ನರ್ಸಿಂಗ್ ಹೋಂಗಳು ಈ ರೀತಿ ಸಿಕ್ಕಾಪಟ್ಟೆ ಬೆಳೆಯುವುದಕ್ಕೆ ಅವಕಾಶವಿರುವುದಿಲ್ಲ, ಕುದುರೆಗಳಿಗಾದರೂ ಲಗಾಮು ಇರುತ್ತದೆ. ಆದರೆ ಈ ಖಾಸಗೀ ನರ್ಸಿಂಗ್ ಹೋಂಗಳಿಗೆ ಲಂಗು ಲಗಾಮು ಯಾವುದೂ ಇಲ್ಲವಾಗಿದೆ. ಇದನ್ನು ತಡೆಗಟ್ಟುವ ಸಲುವಾಗಿ ಇಂತಹ ಒಂದು ಮಸೂದೆಯನ್ನು ತಂದಿರುವುದು ಸ್ವಾಗತಾರ್ಹವಾಗಿದೆ. ಈ ಮೂಲಕ ಅವುಗಳಿಗೆ ಒಂದು ಡಿಸಿಪ್ಲೀನ್ ಹಾಕಿ ಇಡೋಣ. ಒಂದು ಸಂದರ್ಭದಲ್ಲಿ ಒಬ್ಬ ರೋಗಿಗೆ ಕ್ಯಾನ್ಸರ್ ಇದೆ ಎಂಬುದು ಗೊತ್ತಿದ್ದರೂ ಸಹ ಅದನ್ನು ೩ ಜನ ಡಾಕ್ಟರ್‌ಗಳು ಟೆಸ್ಟ್ ಮಾಡಿ ಒಬ್ಬೊಬ್ಬರೂ ೨೫೦ ರೂ.ಗಳಂತೆ ಒಟ್ಟು ೭೫೦ ರೂಗಳ ಬಿಲ್‌ನ್ನು ಕೊಟ್ಟರು. ತಾವು ಯಾವಾಗಲೂ ವಿಧಿನಿಯಮಗಳಿಗೆ ಅಂಟಿ ಕೊಂಡಿರುವ ಕಾರಣ ಸರ್ಕಾರೀ ಆಸ್ಪತ್ರೆಗಳಲ್ಲಿ ಒಳ್ಳೆಯ ಡಿಸಿಪ್ಲೀನ್ ಇರುವಂತೆ ನೋಡಿಕೊಳ್ಳಬೇಕು. ಇಂದು ಒಬ್ಬ ರೋಗಿ ಖಾಸಗೀ ನರ್ಸಿಂಗ್ ಹೋಂಗೆ ಹೋದರೆ ಒಬ್ಬರು ಡಾಕ್ಟರ್ ನೋಡಿದ ಮೇಲೆ ಮತ್ತೊಬ್ಬರನ್ನು ನೋಡಿ ಎಂದು ಹೇಳುತ್ತಾರೆ. ಈ ರೀತಿ ಒಬ್ಬೊಬ್ಬರ ಹತ್ತಿರವೂ ಹೋದಾಗಲೆಲ್ಲಾ ೨೫ ರೂಗಳನ್ನು ಕನ್‌ಸಲ್‌ಟೇಷನ್ ಫೀ ಎಂದು ಕೊಡಬೇಕಾಗುತ್ತದೆ. ಇದನ್ನು ಮೊದಲು ನಿಲ್ಲಿಸಬೇಕು ಜೊತೆಗೆ ದಳ್ಳಾಳಿಗಳು ಎರಡು ರೀತಿ ಬಿಲ್‌ಗಳನ್ನು ಬರೆಯುವಂತೆ ಈ ಖಾಸಗೀ ಡಾಕ್ಟರ್‌ಗಳು ಸಹ ಮಾಡುತ್ತಿದ್ದಾರೆ. ಹೆಚ್ಚಿನ ಹಣ ಪಡೆದುಕೊಂಡು ಕಡಿಮೆ ಹಣಕ್ಕೆ ಬಿಲ್ ಕೊಡುತ್ತಾರೆ. ಈ ತರಹ ಆಗುವಂತೆ ನೋಡಿಕೊಳ್ಳುವುದಕ್ಕೆ ಏನು ಮಿಷನರಿಯನ್ನು ತಾವು ಇಟ್ಟಿದ್ದೀರಿ ? ಇದನ್ನು ತಾವು ತಿಳಿಸಬೇಕು.

ಇಂದು ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡುವ ವಿದ್ಯಾರ್ಥಿಗಳು ಯಾರಾದರು ತಹಶೀಲ್ ದಾರರ ಹತ್ತಿರ ಅಥವಾ ಬಿ. ಡಿ. ಒ. ಹತ್ತಿರ ತಮ್ಮ ಇನ್‌ಕಮ್ ಬಗ್ಗೆ ಸರ್ಟಿಫಿಕೇಟ್ ಕೇಳುವುದಕ್ಕೆ ಹೋದರೆ ನಿಮ್ಮ ತಂದೆತಾಯಿಗಳ ಪೈಕಿ ಯಾರಾದರು ಫ್ಯಾಮಿಲಿ ಪ್ಲಾನಿಂಗ್ ಆಪರೇಷನ್ ಮಾಡಿಸಿ ಕೊಂಡಿರುವ ಸರ್ಟಿಫಿಕೇಟ್ ತಂದು ತೋರಿಸಿದರೆ ಇನ್‌ಕಮ್ ಸರ್ಟಿಫಿಕೇಟ್ ಕೊಡುತ್ತೇವೆಂದು ಹೇಳು ತ್ತಿದ್ದಾರೆ. ಈ ರೀತಿ ನಡೆಯುತ್ತಿರುವುದನ್ನು ತಾವು ಮೊದಲು ನಿಲ್ಲಿಸಬೇಕು. ಇಂದು ಕೆ.ಎಸ್.ಆರ್.ಟಿ.ಸಿ, ಯಲ್ಲಿ ಕೆಲಸ ಮಾಡುತ್ತಿರುವ ನೌಕರರ ಪೈಕಿ ಕೆಲವರು ತಮ್ಮ ಕೆಲಸವನ್ನು ಸರಿಯಾಗಿ ನಿರ್ವಹಣೆ ಮಾಡದ ಕಾರಣ ಸಸ್ಪೆಂಡ್ ಆಗುತ್ತಿರುವುದನ್ನು ನಾವು ದಿನವೂ ಪೇಪರ್‌ನಲ್ಲಿ ನೋಡುತ್ತಿದ್ದೇವೆ. ಅಲ್ಲಿಯೂ ಸಹ ಸಣ್ಣ ಸಣ್ಣ ಇಲಿಗಳು ಸಿಕ್ಕಿ ಹಾಕಿಕೊಳ್ಳುತ್ತಿವೆಯೇ ಹೊರತು ಹೆಗ್ಗಣಗಳು ಸಿಕ್ಕಿ ಬೀಳುತ್ತಿಲ್ಲ. ಈ ಹೆಗ್ಗಣಗಳು ವಿಧಾನಸೌಧದ ಫೌಂಡೇಷನ್‌ನಲ್ಲಿ (ಒಳಗಡೆಯಲ್ಲಿ) ಭದ್ರವಾಗಿ ಕುಳಿತಿವೆ. ತಮ್ಮ ಇಲಾಖೆ ಯಲ್ಲಿಯೂ ಇರತಕ್ಕಂಥ ಇಂತಹ ಹೆಗ್ಗಣಗಳನ್ನು ತಾವು ಹಿಡಿದು ಮೊದಲು ಬಲಿ ಹಾಕಬೇಕು. ಏಕೆಂದರೆ ಇಂತಹ ಕೆಲವು ಹೆಗ್ಗಣಗಳು ಪ್ರೈವೇಟ್ ನರ್ಸಿಂಗ್ ಹೋಂಗಳನ್ನು ನಡೆಸುವುದರ ಮೂಲಕ ಹಣ ಸಂಪಾದನೆ

ಮಾಡುತ್ತಿವೆ. ಇದನ್ನು ತಾವು ತಡೆಗಟ್ಟಿದ್ದೇ ಆದರೆ ಅವುಗಳು ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಯುವುದಕ್ಕೆ ಆಸ್ಪದವಿರುವುದಿಲ್ಲ. ಮುಖ್ಯವಾಗಿ ತಾವು ಹೆಲ್ತ್ ಸರ್ವಿಸಸ್‌ನ್ನು ರಾಷ್ಟ್ರೀಕರಣ ಮಾಡುವಂತಹ ಗುರಿಯನ್ನು ತಾವು ಇಟ್ಟುಕೊಳ್ಳಬೇಕು. ಸಮಾಜವಾದವನ್ನು ಜಾರಿಗೆ ತರಬೇಕೆಂದು ಹೊರಟಿರುವಾಗ ಇದರ ಒಂದು ಜವಾಬ್ದಾರಿ ನಿಮ್ಮ ಮೇಲಿದೆ. ಕರ್ನಾಟಕ ರಾಜ್ಯದಲ್ಲಿರುವಂತಹ ಎಲ್ಲ ಜನರ ಆರೋಗ್ಯವನ್ನು ನೋಡಿಕೊಳ್ಳುವಂತಹ ಒಂದು ಜವಾಬ್ದಾರಿ ಮಾನ್ಯ ಆರೋಗ್ಯ ಮಂತ್ರಿಗಳ ಮೇಲಿದೆ. ಈ ರೀತಿಯ ಜವಾಬ್ದಾರಿಯಿಂದ್ದರೂ ಸಹ ನಿಮ್ಮ ಕೂಸನ್ನು ಮತ್ತೊಬ್ಬರ ತೊಟ್ಟಿಲಿನಲ್ಲಿ ಹಾಕುವುದು ಸರಿಯಲ್ಲ. ರಾಷ್ಟ್ರೀಕರಣ ಮಾಡಲು ನಿಮ್ಮಲ್ಲಿ ಈಗ ಹಣವಿಲ್ಲವಾಗಿದೆ. ನಿಮ್ಮಲ್ಲಿ ಫೈನಾನ್ಸ್ ಇಲ್ಲದಿದ್ದರೆ ಖಾಸಗೀ ನರ್ಸಿಂಗ್ ಹೋಂಗಳ ಮೇಲೆ ಒಂದು ರೀತಿಯ ಕಂಟ್ರೋಲ್‌ನ್ನಾದರೂ ತಾವು ಇಟ್ಟುಕೊಳ್ಳಬೇಕು. ಈಗ ಅಲ್ಲಿ ನಡೆಯುತ್ತಿರುವ ಅನ್ಯಾಯಗಳ ಬಗ್ಗೆ ಒಂದೆರಡು ಉದಾಹರಣೆಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಈ ಪ್ರೈವೇಟ್ ನರ್ಸಿಂಗ್‌ಹೋಂಗಳಲ್ಲಿ ಮನುಷ್ಯರ ರಕ್ತವನ್ನು ತೋಳಗಳಿಗಿಂದ ಹೆಚ್ಚಾಗಿ ಹೀರುತ್ತಾರೆ. ೧೫-೨೦ ರೂಪಾಯಿಗಳಿಗೆ ಒಂದು ಬಾಟಲ್ ರಕ್ತ ಸಿಕ್ಕಿದರೂ ಸಹ, ಅದನ್ನು ರೋಗಿಗೆ ಕೊಟ್ಟ ಮೇಲೆ ನೂರು ರೂಗಳನ್ನು ಅಲ್ಲಿ ಚಾರ್ಜ್ ಮಾಡುತ್ತಾರೆ. ಈ ರಕ್ತವಾದರೂ ಸಹ ಅವರಿಗೆ ಯಾವ ರೀತಿ ಸಿಗುತ್ತದೆಂದರೆ) ನನ್ನಂತಹ ೭೫ ಕೆ ಜಿ ತೂಕವಿರುವವರು ಒಳ್ಳೆಯ ಆರೋಗ್ಯವಿರುವವರುದಾನ ಮಾಡಿದಂತಹ ರಕ್ತ ಅವರಲ್ಲಿ ಇರುವುದಿಲ್ಲ. ಯಾರಿಗೇ ರೋಗವಿರುತ್ತದೋ ಯಾರಿಗೆ ಊಟಕ್ಕೆ ತೊಂದರೆ ಇರುತ್ತದೋ, ಯಾರು ೫೦ ಕೆ. ಜಿ. ಗಿಂತ ಕಡಿಮೆ ತೂಕವಿರುತ್ತಾರೋ ಅಂತಹವರೇ ಹಣದಾಸೆಗೆ ಹೋಗಿ ತಮ್ಮ ರಕ್ತವನ್ನು ಕೊಡುತ್ತಾರೆ. ಅಂತಹವರಿಂದ ಇವರು ರಕ್ತ ಪಡೆದುಕೊಂಡು ೨೦ ಅಥವಾ ೧೫ ರೂಪಾಯಿಗಳನ್ನು ಕೊಟ್ಟು ಕಳುಹಿಸುತ್ತಾರೆ. ಇಂತಹ ಒಂದು ಅನ್ಯಾಯ ಇಂದು ಸಮಾಜದಲ್ಲಿ ನಡೆಯುತ್ತಿದೆ, ಯಾರು ರಾಕ್ಷಸ ಜನರಿದ್ದಾರೆ ಯಾರು ಸಮಾಜ ಘಾತುಕರಿದ್ದಾರೆ ಯಾರು ಸಮಾಜದ್ರೋಹಿಗಳಿದ್ದಾರೆ, ಅಂತಹವರು ಇಂದು ಸಮಾಜಸೇವಕರ ರೂಪದಲ್ಲಿ ಈ ಖಾಸಗೀ ನರ್ಸಿಂಗ್ ಹೋಂಗಳನ್ನು ತೆರೆದು ಜನರಿಂದ ಹಣವನ್ನು ನಾನಾ ರೂಪದಲ್ಲಿ ಲೂಟಿ ಮಾಡುತ್ತಿದ್ದಾರೆ. ಈ ಮಸೂದೆಯಲ್ಲಿ ತಾವು ಇಷ್ಟೇ ಫೀಯನ್ನು ಖಾಸಗೀ ನರ್ಸಿಂಗ್ ಹೋಂನವರು ಕಲೆಕ್ಟ್ ಮಾಡಬೇಕೆಂದು ಹೇಳಿದ್ದೀರಿ. ಇದರಿಂದ ಮುಂದೆ ಏನಾಗುತ್ತದೆಂದರೆ ರೋಗಿಗಳಿಗೆ ಇಂಜಕ್ಷನ್ ಕೊಡುವಾಗ ಡಿಸ್ಟಿಲ್ ವಾಟರನ್ನು ಕೊಟ್ಟು ಒಳ್ಳೆಯ ಔಷಧಿಯನ್ನು ಕೊಡಲಾಗಿದೆ ಎಂದು ಹೇಳಿ ಅದಕ್ಕೆ ೧೫ ರೂಪಾಯಿಗಳನ್ನು ಚಾರ್ಜ್ ಮಾಡುತ್ತಾರೆ. ಮತ್ತು ರೋಗಿಗಳು ತಮ್ಮ ನರ್ಸಿಂಗ್ ಹೋಂಗೆ ಬರಲಿ ಎಂದುಕೊಂಡು ತಾವು ಇಲ್ಲಿ ಹೇಳಿರುವುದಕ್ಕಿಂತ ಕಡಿಮೆ ಫೀಯನ್ನು ವಿಧಿಸುತ್ತಾರೆ. ಇದರಿಂದ ಒಂದು ರೀತಿಯಲ್ಲಿ ಕಾಂಪಿಟಿಷನ್‌ಗೆ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ. ಇದ್ದು ಒಳ್ಳೆಯದಲ್ಲ, ಈ ರೀತಿ ಮಾಡಿದರೆ ನಿಮ್ಮ ಗುರಿ ಏನಾಗಿದೆ, ಅದು ರೀ-ಆಕ್ಷನರಿ ಕಾನ್‌ಸೆಪ್ಟ್ ಆಗುತ್ತದೆಂದು ಹೇಳುತ್ತೇನೆ. ಆದಕಾರಣ ಕಾಂಪಿಟಿಷನ್‌ಗೆ ಅವಕಾಶ ಕೊಡಬೇಡಿ. ಈಗಾಗಲೇ ಪ್ರತಿ ಖಾಸಗೀ ನರ್ಸಿಂಗ್ ಹೋಂನವರು ಹತ್ತತ್ತು ಜನದಂತೆ ಬ್ರೋಕರ್ಸ್‌ನ್ನು ಇಟ್ಟುಕೊಂಡಿದ್ದಾರೆ. ಇವುಗಳನ್ನು ಬಸ್ ಸ್ಟಾಂಡ್ ಬಳಿ, ರೈಲ್ವೇ ಸ್ಟೇಷನ್ ಬಳಿ ಇಟ್ಟುಕೊಂಡು ಯಾರಾದರು ರೋಗಿಗಳು ಬಂದರೆ ಸಾಕು, ತಮ್ಮ ನರ್ಸಿಂಗ್ ಹೋಂಗೆ ಬರಬೇಕೆಂದು ಹೇಳಿ ಕರೆದುಕೊಂಡು ಹೋಗುತ್ತಾರೆ. ಕೆಲವರು ತಮ್ಮ ಖಾಯಿಲೆ ವಾಸಿ ಮಾಡಿಕೊಳ್ಳುವ ಸಲುವಾಗಿ ಎಲ್ಲ ಕಡೆಯೂ ತೋರಿಸಿರುತ್ತಾರೆ. ತಿರುಪತಿಗೆ ಹೋಗಿ ಬರುತ್ತಾರೆ, ಎಲ್ಲಿಯೂ ವಾಸಿಯಾಗದಿದ್ದಾಗ ಕೊನೆಗೆ ತಮ್ಮ ಪ್ರಾಣ ಉಳಿಸಿಕೊಳ್ಳುವ ಸಲುವಾಗಿ ಈ ಖಾಸಗೀ ನರ್ಸಿಂಗ್ ಹೋಂಗಳಿಗೆ ಬರುತ್ತಾರೆ. ಇಲ್ಲಿ ಸುಖ ಮತ್ತು ಶಾಂತಿ ಸಿಗುತ್ತದೆಂದು ಖಾಯಿಲೆ ವಾಸಿಯಾಗುತ್ತದೆಂದು ಅವರು ತಿಳಿದಿರುತ್ತಾರೆ. ಆದರೆ ಅಲ್ಲಿಯೂ ನಾನಾ ರೀತಿಯಿಂದ ಡಾಕ್ಟರ್‌ಗಳು ಶೋಷಣೆ (ಎಕ್ಸ್‌ಪ್ಲಾಯಿಟೇಷನ್) ಮಾಡುತ್ತಾರೆ. ಅಲ್ಲಿನ ಡಾಕ್ಟರ್‌ಗಳು ಹೇಳತಕ್ಕಂಥ ಮಾತಿಗೆ ವಿರುದ್ಧವಾಗಿ ಹೇಳತಕ್ಕಂಥ ಧೈರ್ಯ ಆ ಪೇಸೆಂಟ್‌ಗಳಿಗೆ ಇರುವುದಿಲ್ಲ.

ಈ ಮಸೂದೆಯನ್ನು ತಂದಿದ್ದನ್ನು ನಾನು ಸ್ವಾಗತಿಸುತ್ತೇನೆ. ಬಡಪಾಯಿಗಳಿಂದ ಹೆಚ್ಚು ಹಣವನ್ನು ತೆಗೆದುಕೊಳ್ಳತಕ್ಕಂಥಾ ಸಮಾಜಘಾತುಕರನ್ನು ಶಿಕ್ಷಿಸಬೇಕು. ಸರ್ಕಾರದವರು ಮಿನಿಮಮ್ ಚಾರ್ಜ್ ಎಷ್ಟು ಗೊತ್ತು ಮಾಡುತ್ತಾರೆಯೋ ಅಷ್ಟನ್ನು ಮಾತ್ರ ರೋಗಿಗಳಿಂದ ಅವರು ತೆಗೆದುಕೊಳ್ಳಬೇಕು. ೫ ರೂಪಾಯಿ ಇರುವುದಕ್ಕೆ ೨೫ ರೂಪಾಯಿಗಳನ್ನು ತೆಗೆದುಕೊಳ್ಳತಕ್ಕಂಥಾದ್ದು ಸರಿಯಲ್ಲ. ಈ ದೃಷ್ಟಿಯಿಂದ ಈ ವಿಚಾರದಲ್ಲಿ ಎಕ್ಸ್‌ಪರ್ಟ್‌ಗಳ ಒಪೀನಿಯನ್ ತೆಗೆದುಕೊಂಡು ಇಂತಿಂಥಾ ಖಾಯಿಲೆಗೆ, ಇಂತಿಂಥಾ ಟ್ರೀಟ್‌ಮೆಂಟ್‌ಗೆ ಇಷ್ಟಿಷ್ಟು ಮಿನಿಮಮ್ ಚಾರ್ಜ್ ಕೊಡಬೇಕೆಂದು ಫಿಕ್ಸ್ ಮಾಡಬೇಕು. ಕಾಂಪಿಟಿಷನ್ನಿಗೆ ಸ್ಕೋಪ್ ಕೊಟ್ಟರೆ ರೀ ಆಕ್ಷನರಿ ಕಾನ್‌ಸೆಪ್ಟ್ ಆಗುತ್ತದೆ. ಇದು ಸಮಾಜವಾದಕ್ಕೆ ವ್ಯತಿರಿಕ್ತವಾಗುತ್ತದೆ. ಒಂದು ಆಪರೇಷನ್ನಿಗೆ ೫೦ ರೂಪಾಯಿಗಳನ್ನು ತೆಗೆದುಕೊಂಡರೆ ಅದು ರೀ.

ಆಕ್ಷನರಿ ಆಗುತ್ತದೆ. ಇದು ಸರಿಯಲ್ಲ. ಬೇಕಾದರೆ ೨೫ ರೂಪಾಯಿಗಳನ್ನು ತೆಗೆದುಕೊಳ್ಳಲಿ. ಆ ರೀತಿ ದೊಡದೆಫ್ರೀ ಕಾಂಪಿಟಿಷನ್ನಿಗೆ ಬಿಟ್ಟರೆ ಅವರು ಜನಗಳನ್ನು ಎಕ್ಸ್‌ಪ್ಲಾಯ್‌ಟೇಷನ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಆರ್. ಶ್ರೀನಿವಾಸುಲುನಾಯ್ಡು (ಶಾಂತಿನಗರ).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಆರೋಗ್ಯ ಸಚಿವರು ಈ ಸಭೆಯ ಮುಂದೆ ತಂದಿರತಕ್ಕ ಕರ್ನಾಟಕ ಪ್ರೈವೇಟ್ ನರ್ಸಿಂಗ್ ಹೋಮ್ ಬಿಲ್ಲನ್ನು ಸ್ವಾಗತಿಸುತ್ತಾ ನಾನು ನಾಲ್ಕು ಮಾತುಗಳನ್ನು ಆಡುತ್ತೇನೆ. ಈ ಮಸೂದೆ ಬಹಳ ಒಳ್ಳೆಯದು, ಮತ್ತು ಇದರ ಮೂಲ ಉದ್ದೇಶ ಬಹಳ ಘನವಾದದ್ದು ಆದರೆ ಇದನ್ನು ಕಾರ್ಯರೂಪಕ್ಕೆ ತರತಕ್ಕಂಥಾ ಮೆಷನರಿ ನಮ್ಮಲ್ಲಿ ಇದೆಯೇ? ಇದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ತಕ್ಕ ಏಜನ್ಸಿಯನ್ನು ಇವರು ತಯಾರುಮಾಡಿದ್ದಾರೆಯೆ ಎಂದು ನಾನು ಕೇಳುತ್ತೇನೆ. ಇದರ ಜೊತೆಗೆ ಈ ಮಸೂದೆಯ ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ ಇದರಲ್ಲಿ ಈ ಒಂದು ಕೆಲಸಕ್ಕೆ ಬೇಕಾದ ಎಕ್ವಿಪ್‌ಮೆಂಟ್ ಸ್ಟಾಫ್ ಇತ್ಯಾದಿ ಇದರಲ್ಲಿ ಏನೇನು ಕೇಳಿದ್ದಾರೆಯೋ ಅದೆಲ್ಲಾ ನಾನು ಒಪ್ಪಿಕೊಳ್ಳುತ್ತೇನೆ. ಪ್ರೈವೇಟ್ ನರ್ಸಿಂಗ್ ಹೋಮ್ ಏತಕ್ಕೆ ಅಸ್ತಿತ್ವಕ್ಕೆ ಬಂತು ಎನ್ನುವ ಪ್ರಶ್ನೆ ಬಂದ ತಕ್ಷಣ ಇವು ಪ್ರೈವೇಟ್ ಕಮರ್ಷಿಯಲ್ ಇನ್‌ಸ್ಟಿಟ್ಯೂಟ್ಸ್ ಆಗಿವೆಯೆಂದು ಹೇಳಿದರೆ ತಪ್ಪಾಗಲಾರದು. ಇಲ್ಲಿ ಬಡವರನ್ನು ಸುಲಿಗೆ ಮಾಡುತ್ತಿದ್ದಾರೆ. ಇದರಲ್ಲಿ ಇನ್ನೊಂದು ಆಶ್ಚರ್ಯಕರ ಸಂಗತಿ ಏನೆಂದರೆ ಈ ಮಸೂದೆಯ ಡೆಫೆನಿಷನ್‌ನಲ್ಲಿ ಆಸ್ಪತ್ರೆ ಮತ್ತು ಕ್ಲಿನಿಕ್ ಎರಡನ್ನೂ ಹಾಕಿದ್ದಾರೆ. ಬೆಂಗಳೂರು ಪಟ್ಟಣದಲ್ಲಿ ಇವೊತ್ತು ದೊಡ್ಡ ದೊಡ್ಡ ನರ್ಸಿಂಗ್ ಹೋಮ್‌ಗಳು ಇವೆ. ಅವುಗಳಲ್ಲಿ ಚಿಕಿತ್ಸೆಗೆ ಹೋಗುವಂತಹ ರೋಗಿಗಳಿಗೆ ಹೆಚ್ಚು ರೇಟನ್ನು ವಿಧಿಸುತ್ತಿದ್ದಾರೆ ಪಟ್ಟಣಗಳಲ್ಲಿರತಕ್ಕ ಕ್ಲಿನಿಕ್‌ಗಳಲ್ಲಿ ಕೆಲವು ಎಕ್ವಿಪ್‌ಮೆಂಟ್ ಮತ್ತು ಔಷಧಿ ಇತ್ಯಾದಿಗಳನ್ನು ಇಟ್ಟುಕೊಂಡಿರುತ್ತಾರೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಕ್ಲಿನಿಕ್‌ಗಳಲ್ಲಿ ಒಂದು ಸ್ಟೆತಸ್‌ಕೋಪ್ ಮತ್ತು ಮೂರು ಔಷಧಿ ಬಾಟಲುಗಳನ್ನು ಇಟ್ಟುಕೊಂಡಿರುತ್ತಾರೆ. ಇದರಿಂದಾಗಿ ಗ್ರಾಮಾಂತರ ಪ್ರದೇಶದ ಜನಗಳಿಗೆ ಸರಿಯಾದ ಮೆಡಿಕಲ್ ಫೆಸಿಲಿಟೀಸ್ ದೊರೆಯುತ್ತಾ ಇಲ್ಲ ಈ ದೃಷ್ಟಿಯಿಂದ ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಕ್ಲಿನಿಕ್ ಮತ್ತು ನರ್ಸಿಂಗ್ ಹೋಮ್‌ಗಳನ್ನು ಕಂಟ್ರೋಲ್ ಮಾಡುವುದಕ್ಕಾಗಿ ಮಾನ್ಯ ಸಚಿವರು ಈಗ ಈ ಒಂದು ಕಾನೂನನ್ನು ಈ ಸಭೆಯ ಮುಂದೆ ತಂದಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ೫ ಸಾವಿರ ಜನಗಳಿಗೆ ಒಬ್ಬರು ಡಾಕ್ಟರು ಸಿಕ್ಕುತ್ತಾರೆ. ಆದರೆ ಪಟ್ಟಣಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ನರ್ಸಿಂಗ್ ಹೋಮ್‌ಗಳು ಮತ್ತು ಕ್ಲಿನಿಕ್‌ಗಳು ಇವೆ. ಇವುಗಳ ಮೇಲೆ ಕಂಟ್ರೋಲ್ ತರುವುದರ ಜೊತೆಗೆ ಒಬ್ಬೊಬ್ಬ ಡಾಕ್ಟರಿಗೆ ಸರ್ಕಾರದವರು ೨೦–೮೦ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಮೆಡಿಕಲ್ ವಿದ್ಯಾಭ್ಯಾಸವನ್ನು ಕೊಟ್ಟು ನಂತರ ಪರದೇಶಗಳಿಗೆ ಹೋಗಿ ಬಂದು ಇಲ್ಲಿ ನರ್ಸಿಂಗ್ ಹೋಮ್ ಮತ್ತು ಕ್ಲಿನಿಕ್‌ಗಳನ್ನು ತೆರೆಯುತ್ತಾರೆ. ನಮ್ಮ ದೇಶದಲ್ಲಿ ಬ್ರೇನ್-ಡ್ರೇನ್ ಆಗುತ್ತಿದೆ. ಅಂಥವರ ಮೇಲೆಯೂ ಸಹ ಸರ್ಕಾರದವರು ಸ್ವಲ್ಪ ಕಂಟ್ರೋಲ್ ಇಟ್ಟುಕೊಳ್ಳುವುದು ಒಳ್ಳೆಯದು. ಈ ಕಾಯಿದೆಗೆ ಅನುಗುಣವಾಗಿ ಲೈಸೆನ್ಸ್ ತೆಗೆದುಕೊಳ್ಳದಿದ್ದರೆ ಅಂಥವರಿಗೆ ಪೆನಾಲ್ಟಿ ೫ ಸಾವಿರ ರೂಪಾಯಿಗಳು ಮತ್ತು ೬ ತಿಂಗಳು ಕಠಿಣ ಸಜವನ್ನು ಗೊತ್ತು ಮಾಡಿದ್ದಾರೆ. ಇದು ಜಾಸ್ತಿ ಆಯಿತು. ಇದನ್ನು ಕಡಿಮೆ ಮಾಡಬೇಕು. ಈಗ ನರ್ಸಿಂಗ್ ಹೋಮ್ ಮತ್ತು ಮೆಡಿಕಲ್ ಟ್ರೀಟ್‌ಮೆಂಟ್ ಮಾಡ್ರನ್ ಸಿಸ್ಟಮ್ ಅಲೋಪತಿಕ್‌ನಲ್ಲಿ ಮಾತ್ರ ನಡೆಯುತ್ತಿದೆ ಇದರಂತೆಯೇ ಆಯುರ್ವೇದ, ಯೂನಾನಿ ಮತ್ತು ಹೋಮಿಯೋಪತಿ ಮುಂತಾದ ಇಂಡಿಯನ್ ಮೆಡಿಸಿನ್ ಸಿಸ್ಟಂನಲ್ಲಿಯೂ ಕೂಡ ಟ್ರೀಟ್‌ಮೆಂಟ್ ಕೊಡುವಂತೆ ಅದಕ್ಕೆ ಪ್ರೋತ್ಸಾಹ ಕೊಡಬೇಕು, ಮತ್ತು ಅವರಿಗೆ ಬೇಕಾದ ಸೌಲಭ್ಯವನ್ನು ಕಲ್ಪಿಸಿಕೊಡಬೇಕಾಗುತ್ತದೆ. ಲೈಸೆನ್ಸಿಂಗ್ ಅಥಾರಿಟಿಯ ಬಗ್ಗೆ ಸ್ವಲ್ಪ ಹೆಚ್ಚಿನ ವಿವರಗಳನ್ನು ಕೊಡಬೇಕಾಗುತ್ತದೆ. ಇನ್‌ಸ್ಪೆಕ್ಷನ್ ಮಾಡತಕ್ಕ ಕಾಲದಲ್ಲಿ ಅಡ್ಮಿನಿಸ್ಟ್ರೇಷನ್ ಸೈಡ್, ಟೆಕ್ನಿಕಲ್ ಸೈಡ್ ಮತ್ತು ಔಷಧಿಗಳು ಇವುಗಳನ್ನು ಪರಿಗಣಿಸಬೇಕು ಎಲ್ಲಾ ಒಟ್ಟಿಗೆ ಸೂಚಿಸಿದರೆ ಅರ್ಥವಾಗುವುದಿಲ್ಲ. ಇದನ್ನು ಮೆಡಿಕಲ್ ಕ್ವಾಲಿಫಿಕೇಷನ್ ಇದ್ದವರು ಮಾತ್ರ ಇನ್‌ಸ್ಪೆಕ್ಷನ್ ಮಾಡುವುದಕ್ಕೆ ಸಾಧ್ಯವೇ ಹೊರತು ಬರೀ ಅಡ್ಮಿನಿಸ್ಟ್ರೇಷನ್ ಲೈನಿನಲ್ಲಿರತಕ್ಕವರು ಇನ್‌ಸ್ಪೆಕ್ಷನ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹೀಗಿರುವಾಗ ಇದನ್ನು ಯಾವರೀತಿ ಕಾರ್ಯ ರೂಪಕ್ಕೆ ತರುತ್ತಾರೆ ಎನ್ನುವ ಬಗ್ಗೆ ಸ್ವಲ್ಪ ರೂಪರೇಷೆಗಳು ಮತ್ತು ವಿವರಗಳನ್ನು ಕೊಡಬೇಕಾಗುತ್ತದೆಂದು ಮಾನ್ಯ ಮಂತ್ರಿಗಳ ಗಮನ

ಸೆಳೆಯುತ್ತೇನೆ ; ಎಲ್ಲಾ ಪದ್ಧತಿಗಳಿಗೂ ಸಮಭಾವನೆಯಿರಬೇಕೆಂದು ಒತ್ತಿ ಹೇಳುತ್ತೇನೆ. ಒಟ್ಟಿನಲ್ಲಿ ಇದರ ಮೂಲ ಉದ್ದೇಶವೇನೋ ಬಹಳ ಒಳ್ಳೆಯದು. ಆದರೆ ಇದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಬೇಕಾದ ಮೆಷನರಿಯನ್ನು ಕಂಡುಹಿಡಿಯಬೇಕು. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† SRI B. B. SAYANAK (Belgaum).—Mr. Deputy Speaker Sir, I rise to support this Bill. But I want to make some comments. We must know why these private nursing homes are coming up in almost all the cities. Even the expert Doctors are starting the private nursing Homes in the Cities because the working of the Civil Hospitals is not good. The Doctors and the Hon. Doctors who are appointed in the Civil Hospitals are not giving good treatment to the patients. Who are going to Hospitals ? The Muslim people and the Harijans are taking advantage of using these Civil Hospitals The rich people are not going. I am on the visitors Board and I know what the position is. They tell us that they are coming to Civil Hospitals because they are poor, and they would not come there if they have got money. They have expressed on many occasions that the treatment in the Civil Hospitals is not good. In Belgaum there is a Medical College and a Civil Hospital. There is a tussel between the Dean of the Medical College and the Civil Surgeon. The opinion of the Dean is that the Civil Surgeon should not operate the patients. In fact, the Dean is taking some of the patients from the Civil Hospital to his Nursing Home and operating them in his Clinic, and he is also using the services of College Professors in his Clinic. Is this justice ?

SRI H. M. CHANNABASAPPA.—The Hon'ble member is not correctly informed. The Civil Surgeon is an expert in gynecology and he cannot be permitted to conduct surgical operations. How can we expect a Gynecologist to be an expert in surgery ?

SRI B. B. SAYANAK.—Though he is a Gynecologist, he is an expert doctor from the very beginning.

SRI H. M. CHANNABASAPPA.—I had sent for both the doctors and made enquiries. The Civil surgeon admitted that he is not an expert surgeon. How can he take up all surgical works ?

SRI B. B. SAYANAK.—Sir, I know that there is tussle between the two. I am also Member on the Visitors' Board. After the Civil Surgeon came over to Belgaum hospital, the Civil hospital has been kept very clean ; prior to his coming it was not kept clean.

SRI H. M. CHANNABASAPPA.—To that extent we congratulate the Hon'ble member ;

SRI B. B. SAYANAK.—There is an expert doctor in the Medical College by name Rajasekhar and be is minting money in Belgaum.

MR DEPUTY SPEAKER —The Hon'ble member may please avoid mentioning names. If necessary, he can write a letter to the Hon'ble Minister. Persons who are not here and whoare not capable of defending themselves should not be referred to.

SRI H. M. CHANNABASAPPA.—There can no two opinions that some doctors are minting money. But those things will vanish hereafterwards.

SRI B. B. SAYANAK —Private Nursing Homes are giving good and personal service to the public; their treatment is good and the doctors visit the patients every now and then. That is why people go to Private Nursing Homes though the fee is exorbitant. Rich people never bother for money, but care more for the health. Take for example the Joslock Hospital. The leaders of the Congress Party and other parties are going to this hospital for treatment because that is the best hospital So also the Vellore hospital. If the treatment in the Civil hospital is good, nobody will approach private doctors and Private Nursing Homes.

For the Private Nursing Homes to be licensed, only two months time limit is fixed This is too short a period. They have to equip themselves with the necessary equipment, furniture, etc., and as such the time limit should be increased The penalty clause of 6 months imprisonment or a fine of Rs 5,000 is too much. Expert private doctors will not do anything against the law. Therefore, some lenient punishment should be prescribed The Government is going to prescribe the fee for various treatments in Private Nursing Homes. Even the Civil hospitals some doctors are charging the fee. Supposing they pass a receipt for a lesser amount, but charge more, how can the Government take action agains-them ?

SRI H. M. CHANNABASAPPA —We will certainly take action ;

SRI B. B. SAYANAK —Who is going to give the clue ?

SRI H. M. CHANNABASAPPA.—The Government has got adequate machinery to find out all that.

SRI B. B. SAYANAK.—Sir, the Government have passed so many laws and Acts, but what about their implementation ? They have passed the Beggary Prohibition Act. But, has it been implemented ? No. The municipalities are charging the beggary cess, but beggars are coming everyday to our houses. When we pass a legislation, there must be cent per cent implementation, and then only it will be a good legislation. I request the Government to bear this aspect in mind.

With these words, I thank the Chair.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).— ಸನ್ಮಾನ್ಯ ಅಧ್ಯಕ್ಷರೇ, ನೂತನ ಆರೋಗ್ಯ ಮಂತ್ರಿಗಳು ಮಂಡಿಸಿರತಕ್ಕಂಥ ವಿಧೇಯಕವನ್ನು ಅರ್ಧಂಬರ್ಧಸ್ವಾಗತಿಸಲಿಕ್ಕೆ ಅಪೇಕ್ಷೆಪಡುತ್ತೇನೆ. ಕಾರಣ ಏನೆಂದರೆ, ಇವರಿಗೆ ಅಕ್ಕಿ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ ಇವರಿಗೆ ಪ್ರೈವೇಟ್‌ನರ್ಸಿಂಗ್ ಹೋಂಗಳ ಬಗ್ಗೆ ಒಳಗೆ ಪ್ರೀತಿ ಉಂಟು ಆದರೆ ಜನಕ್ಕೆ ತೋರಿಸುವುದಕ್ಕೆ ಕಾನೂನು ಬೇಕು ಈ ರೀತಿ ಅರ್ಧಂಬರ್ಧ ಮಾಡುವ ಬದಲು ನಮ್ಮ ರಾಜ್ಯದಲ್ಲಿ ಪ್ರೈವೇಟ್ ನರ್ಸಿಂಗ್ ಹೋಂಗಳು ಏನಿವೆ ಅವುಗಳನ್ನು ಸಂಪೂರ್ಣವಾಗಿ ಸರ್ಕಾರ ತನ್ನ ವಶಕ್ಕೆ ಏಕೆ ತೆಗೆದುಕೊಳ್ಳಬಾರದಾಗಿತ್ತು. ಹಾಗೆ ತೆಗೆದು ಕೊಂಡರೆ ಮಾತ್ರ ಇದಕ್ಕೆ ಪರಿಪೂರ್ಣತೆಯ ಸ್ವರೂಪ ಬರುತ್ತದೆ. ಇದು ನನಗೆ ತಿಳಿದ ಮಟ್ಟಿಗೆ ನಿಜವಾಗಿ ನೂರಕ್ಕೆ ನೂರು ಸಾರ್ಥಕವಾಗುಂತದೆಂದು ನನಗೆ ಅನ್ನಿಸತ್ತದೆ. ಹಿಂದೆ ಮಾನ್ಯ ಮಿತ್ರರು ಹೇಳಿದಹಾಗೆ ಏಕೆ ಜನ ವಿಶೇಷವಾಗಿ ಖಾಸಗಿ ನರ್ಸಿಂಗ್ ಹೋಂಗಳಿಗೆ ಹೋಗುತ್ತಾರೆಂದರೆ ನಮ್ಮ ಸರ್ಕಾರದ ಆಸ್ಪತ್ರೆಗಳಲ್ಲಿ ಸರಿಯಾದ ವ್ಯವಸ್ಥೆ ಇಲ್ಲ ಬೇಕಾದಷ್ಟು ಔಷಧಿ ಸಾಮಗ್ರಿಗಳಿಲ್ಲ. ಕೊನೆಯ ಪಕ್ಷ ಅಲ್ಲಿ ಮಾನ್ಯ ಶ್ರೀ ಚನ್ನಬಸಪ್ಪನವರು ದಬ್ಬಳಗಳನ್ನಾದರೂ ಸರಬ ರಾಜುಮಾಡುತ್ತಾರೋ ಏನೋ ನೋಡಬೇಕು. ಅತ್ಯಂತ ಅವಶ್ಯಕವಾದಂಥ ಕೆಲವು ಔಷಧಿಗಳಿವೆ ಅವು ಗಳ ಹೆಸರುಗಳನ್ನಾದರೂ ಈ ಸಂದರ್ಭದಲ್ಲಿ ಹೇಳುತ್ತೇನೆ. ಅವು ಯಾವುವೆಂದರೆ, ಎ. ಪಿ. ಸಿ. ಟ್ಯಾಬ್ ಲೆಟ್ಸ್, ಆಸ್‌ಪಿರಿನ್ ಟ್ಯಾಬ್‌ಲೆಟ್ಸ್, ಎಸ್. ಜಿ. ಟ್ಯಾಬ್‌ಲೆಟ್ಸ್, ಎಂಟ್ರುವೈರ್ಸ್ ಇನ್‌ಜಕ್ಷನ್ಸ್, ಐರನ್ ಟ್ಯಾಬ್‌ಲೆಟ್ಸ್, ಮತ್ತು ಸೀಕ್ಪೆಲ್ ಟ್ಯಾಬ್‌ಲೆಟ್ಸ್— ಇವು ಅತ್ಯಂತಾವಶ್ಯಕವಾಗಿ ಬೇಕಾಗಿರುವುದರಿಂದ, ಇವುಯಾವೂ ನಮ್ಮ ಸರ್ಕಾರದ ಆಸ್ಪತ್ರೆಗಳಲ್ಲಿ ಸಿಗುವುದೇ ಇಲ್ಲ. ಸಾಕಷ್ಟು ಸ್ಟಾಕ್ ಇರುವುದೇ ಇಲ್ಲ. ಅದ ರಿಂದಾಗಿಯೇ ಅನೇಕ ಜನರು ಪ್ರೈವೇಟ್ ನರ್ಸಿಂಗ್ ಹೋಂಗಳಿಗೆ ಹೋಗುತ್ತಾರೆ.

5-30 P. M.

ಇನ್ನೊಂದು ವಿಷಯ. ಪ್ರೈವೇಟ್ ನರ್ಸಿಂಗ್ ಹೋಂನಲ್ಲಿಯೂ ಸಹ ಇತ್ತೀಚೆಗೆ ಬಹಳವಾಗಿ ಲೂಟಿಯಾಗುತ್ತದೆ. ಅವುಗಳ ಬಗ್ಗೆಯೂ ಸರ್ಕಾರ ಸ್ವಲ್ಪಮಟ್ಟಿಗಾದರೂ ನಿಯಂತ್ರಣ ಕ್ರಮವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಇನ್ನೊಂದು ವಿಶೇಷ ವಿಷಯವೇನೆಂದರೆ ಇವತ್ತು ಮೆಡಿಕಲ್ ಕಾಲೇಜು ಗಳಿಂದ ಡಾಕ್ಟರ್‌ಗಳಾಗಿ ಬರತಕ್ಕ ವಿದ್ಯಾರ್ಥಿಗಳು ನೂರಾರು ಜನ ನಿರುದ್ಯೋಗಿಗಳಾಗಿದ್ದಾರೆ. ಅವರು ಎಲ್ಲಿ ಹೋಗಬೇಕು. ಅವರ ಜೀವನ ಹೇಗೆ ? ಅವರಿಗೆ ಹೆಚ್ಚಿಗೆ ಬೆನಿಫಿಟ್ಟನ್ನು ಕೊಡಬೇಕು. ಅದನ್ನು ಸರಿಯಾಗಿ ಕೊಡುತ್ತಿಲ್ಲ. ಹೊರಗಡೆಯಿಂದ ಬರತಕ್ಕ ವಿದ್ಯಾರ್ಥಿಗಳಿಗೂ ಸಾಕಷ್ಟು ಉದ್ಯೋಗಗಳನ್ನು ಕೊಡುತ್ತಾ ಇಲ್ಲ ಕೆಲವರು ದೊಡ್ಡ ದೊಡ್ಡ ಡಿಗ್ರಿಗಳನ್ನು ಮಾಡಿ ದೊಡ್ಡ ದೊಡ್ಡ ಬಿಲ್ಡಿಂಗ್‌ಗಳನ್ನು ಕಟ್ಟಿಸಿಕೊಂಡಿರುವವರೂ ಇದ್ದಾರೆ. ಕಡು ಬಡವರಾಗಿ ಡಿಗ್ರಿಗಳನ್ನು ಮಾಡಿಕೊಂಡಿರುವವರ ಕಡೆಗೆ ಸರ್ಕಾರ ಕಣ್ಣು ಬಿಟ್ಟು ನೋಡಿದರೆ ಸಾಕು. ಅವರೂ ಸಹ ಇನ್ನೂ ಹೆಚ್ಚಿಗೆ ಬುದ್ಧಿವಂತರಾಗಿ ಅವರಿಂದ ದೇಶಕ್ಕೆ ಮಹತ್ವವಾದ ಸೇವೆಯನ್ನು ಸರ್ಕಾರ ಪಡೆಯಬಹುದು. ಆ ರೀತಿ ದೊಡ್ಡ ದೊಡ್ಡ ಬಂಗಲೆ ಗಳನ್ನು ಕಟ್ಟಿಕೊಂಡಿರುವವರು ಇವರಿಗೆ ಹೆದರದವರಾಗಿದ್ದಾರೆ. ಅಂತಹವರು ನಮ್ಮ ಬೆಂಗಳೂರು ಪಟ್ಟಣದಲ್ಲಿ ಹೆಚ್ಚಾಗಿದ್ದಾರೆ. ಅವರ ಭವನವನ್ನು ನೋಡಿದರೆ ನಮಗೆ ಹೆದರಿಕೆಯಾಗುತ್ತದೆ. ಈ ರೀತಿ ಬೃಹದಾಕಾರವಾದ ಮನೆಯನ್ನು ಕಟ್ಟಿಕೊಂಡು ಇರುವವರ ವಿಷಯದ ಕಡೆಗೆ ಗಮನಕೊಡುವುದಕ್ಕೆ ಬದಲು ಬಡಪಾಯಿಗಳಾಗಿ ಡಿಗ್ರಿ ಪಡೆದಿರುವ ಜನರ ಬಗ್ಗೆ ಹೆಚ್ಚಿನ ಗಮನಕೊಡಬೇಕು. ಅಂತಹವರಿಗೆ ಅಂತಹ ದೊಡ್ಡ ಭವನಗಳೇನೂ ಬೇಡ, ಅವರು ಪಡೆದಿರತಕ್ಕ ಜಮೀನು, ಚಿಕ್ಕ ಜೋಪಡಿ ಇದ್ದರೆ ಅಂತಹವರ ಬಗ್ಗೆ ಸರ್ಕಾರದ ಸಹಾಯ, ಸಹಾನುಭೂತಿ ಅತ್ಯಂತಾವಶ್ಯಕ. ದೊಡ್ಡ ದೊಡ್ಡ ಶ್ರೀಮಂತ ರನ್ನು ಅರ್ಧಂಬರ್ಧವಾಗಿ ಹತೋಟಿ ಇಡುವುದಕ್ಕೆ ಬದಲು ಅವರಿಗೆ ಸೇರಿರತಕ್ಕ ಖಾಸಗಿ ನರ್ಸಿಂಗ್ ಹೋಂಗಳನ್ನು ಸರ್ಕಾರವೇ ಸಂಪೂರ್ಣವಾಗಿ ವಶಪಡಿಸಿಕೊಳ್ಳುವುದು ಈಗ ಅತ್ಯಾವಶ್ಯಕ.

ಇನ್ನೂ ಈಗ ಹಳ್ಳಿಗಳಲ್ಲಿ ಒಂದು ಪ್ರಾಬ್ಲಂ ಬರುತ್ತದೆ. ಯಾವುದೋ ಒಂದು ಕಾಲದಲ್ಲಿ ಅಳಲೇ ಕಾಯಿ ಪಂಡಿತರು ಅನೇಕ ವರ್ಷಗಳಿಂದ ವೈದ್ಯ ವೃತ್ತಿಯನ್ನು ಮಾಡಿಕೊಂಡು ಬಂದಿರುತ್ತಾರೆ. ಅವರು ಕೆಲವರಿಗೆ ಮೊದಲಿನಿಂದಲೂ ಔಷಧಿಗಳನ್ನು ಕೊಡುತ್ತಾ ಇದ್ದಾರೆ. ಅನೇಕ ಸಂದರ್ಭಗಳಲ್ಲಿ ಕೆಲವಾರು ಬಡಪಾಯಿಗಳಿಗೆ ಔಷಧಿಗಳನ್ನು ಕೊಟ್ಟರೂ ದುಡ್ಡು ತೆಗೆದುಕೊಳ್ಳುತ್ತಾ ಇಲ್ಲ. ಅಂತಹ ಪುಣ್ಯಾತ್ಮರೂ ಸಹ ಈಗ ಅಲ್ಲಿ ಇದ್ದಾರೆ. ಆದಮೇಲೆ ಖಾಸಗಿ ವೈದ್ಯರೂ ಸಹ ಬಹಳ ಒಳ್ಳೆಯವರು ಇದ್ದಾರೆ. ಅಂಥ

ವರು ಇಷ್ಟೇ ದುಡ್ಡು ತೆಗೆದುಕೊಳ್ಳಬೇಕೆಂದು ಎಂದಿಗೂ ಕಡ್ಡಾಯ ಮಾಡುತ್ತಿಲ್ಲ, ಇದೆಲ್ಲಕ್ಕಿಂತಲೂ ಅವರೇ ತಾವು ಕಡಿಮೆ ತೆಗೆದುಕೊಳ್ಳಬೇಕೆಂದು ತೀರ್ಮಾನಕ್ಕೆ ಬಂದಿದ್ದಾರೆ, ಸರ್ಕಾರ ಆ ರೀತಿ ಕಡಿಮೆ ತೆಗೆದುಕೊಳ್ಳುವುದಕ್ಕೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿದೆಯೆಂದು ಅವರು ಹೇಳುತ್ತಾರೆ. ಇದರಿಂದ ಹಳ್ಳಿಯ ಜನರಿಗೆ ಬಹಳಮಟ್ಟಿಗೆ ಪ್ರಯೋಜನವಾಗುತ್ತದೆ. ಒಂದು ವೇಳೆ ಯಾರಾದರೂ ಹೆಚ್ಚಿಗೆ ಸಂಭಾವನೆ ಪಡೆಯುತ್ತಿದ್ದಾರೆ ಆ ರೀತಿ ಹೆಚ್ಚಿಗೆ ತೆಗೆದುಕೊಳ್ಳಬಾರದೆಂದು ಹೇಳಬೇಕು. ಅಂತಹವರ ಬಗ್ಗೆ ಮೊಗಮ್ಮಾಗಿ ಒಂದು ರೇಟನ್ನು ಫಿಕ್ಸ್ ಮಾಡಿದರೆ ಒಳ್ಳೆಯದು.

ಶ್ರೀ ಎಚ್. ಎಂ. ಚನ್ನಬಸಪ್ಪ.— ಎಕ್ಸೀಡ್ ಆಗುವುದಕ್ಕೆ ಅವಕಾಶವಿಲ್ಲ. ಮ್ಯಾಗ್ಜಿಮಂ ಎಂದು ನಿಗದಿಮಾಡಲಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.— ನಮ್ಮಲ್ಲಿ ಪರ್ತನೆಯವರು ಎಂದು ಇದ್ದಾರೆ. ಅಂತಹ ಡಾಕ್ಟರ್‌ಗಳಿಗೆ ಒಂದು ವರ್ಷಕ್ಕೆ ೧೦೦೦ ರೂಪಾಯಿಗಳು ಅಥವಾ ೧೦ ಖಂಡುಗ ಬತ್ತ ಎಂದು ಕೊಟ್ಟರೆ ಸಾಕು. ರೈತನ ಮನೆಯ ಕುಟುಂಬದವರೆಲ್ಲರಿಗೂ ಅವರಲ್ಲಿ ಯಾರಿಗೇ ಕಾಯಿಲೆ ಬರಲಿ, ಮಕ್ಕಳುಮರಿ ಎಲ್ಲರಿಗೂ ಔಷಧಿಗಳನ್ನು ಕೊಡುವುದು ರೂಢಿ. ಅವರು ಇಲ್ಲಿಯ ಹಾಗೆ ಫ್ಯಾಮಿಲಿ ಡಾಕ್ಟರ್ಸ್ ಇದ್ದ ಹಾಗೆ. ಹಳೇಕಾಲದ ವೈದ್ಯರು ಅಲ್ಲಿರುತ್ತಾರೆ. ಒಟ್ಟಿನಲ್ಲಿ ಗ್ರಾಮಗಳಲ್ಲಿ ಅಲ್ಲಿರತಕ್ಕ ಜನರಿಗೆ ಬರತಕ್ಕ ಕಾಯಿಲೆಗಳನ್ನು ಗುಣಪಡಿಸುವುದಕ್ಕೆ ಅಲ್ಲಿರತಕ್ಕ ಹಳೆಯ ಕಾಲದ ವೈದ್ಯರಿಗೆ ಸರ್ಕಾರ ನೆರವನ್ನು ಕೊಡಬೇಕು. ಅವರಿಗೆ ತಕ್ಕ ಪ್ರೋತ್ಸಾಹ ಕೊಡಬೇಕು. ಯಾವ ಒಂದು ಗ್ರಾಮದಲ್ಲಿಯೂ ಜನಾರೋಗ್ಯಕ್ಕೆ ಯಾವ ರೀತಿಯಲ್ಲಿಯೂ ತೊಂದರೆ ಬಾರದೆ ಇರುವ ಹಾಗೆ ಸರ್ಕಾರ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳಬೇಕು. ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಶೀರ್‍ನಾಳಿ ಚಂದ್ರಶೇಖರ್ ಅವರು ಮಾತನಾಡಿದಾಗ ಅವರ ಕ್ಷೇತ್ರದ ಎರಡು ಆಸ್ಪತ್ರೆಗಳ ವಿಚಾರವಾಗಿ ಹೇಳಿದರು. ಪ್ರೈವೆಟ್ ನರ್ಸಿಂಗ್ ಹೋಂ ವಿಷಯವಾಗಿಯೂ ಹೇಳಿದರು. ಅವರಿಗೇನಾದರೂ ಕಾಯಿಲೆ ಬಂದರೆ ಅವರು ಅಲ್ಲಿಗೂ ಹೋಗುತ್ತಾರೆ. ಅಂತಹ ಕಡೆಗಳಲ್ಲಿ ಅಂದರೆ ಬಹಳ ಕಂಜೆಸ್ಟೆಡ್ ಏರಿಯಾಗಳಲ್ಲಿ ನರ್ಸಿಂಗ್ ಹೋಂ ಇರುತ್ತದೆ. ಇದು ಸರಿಯಲ್ಲ. ವಿಶಾಲವಾದ ಜಾಗಗಳಲ್ಲಿ ಇವುಗಳನ್ನು ಕಟ್ಟಿಸಿದರೆ ಬಹಳ ಒಳ್ಳೆಯದು. ಅವು ಸ್ವಲ್ಪ ಅಚ್ಚುಕಟ್ಟಾಗಿ ಇರಬೇಕು. ಹಳ್ಳಿಗಳಲ್ಲಿ ಅಂತಹ ಜಾಗಗಳನ್ನು ಮೊದಲೇ ಕಾದರಿಸಿಟ್ಟುಕೊಂಡು ಅಲ್ಲಿ ಒಳ್ಳೊಳ್ಳೆಯ ಡಾಕ್ಟರುಗಳನ್ನು ನೇಮಿಸುವುದರ ಮೂಲಕ ಡಿಸ್‌ಪೆನ್ಸರಿಗಳನ್ನಾಗಲೀ ಆಸ್ಪತ್ರೆಗಳನ್ನಾಗಲೀ, ನರ್ಸಿಂಗ್ ಹೋಂಗಳನ್ನಾಗಲೀ ಕಟ್ಟಿಸಿಕೊಡಬೇಕು ಏಕೆಂದರೆ ಹಳ್ಳಿಯವರು ಅದರಲ್ಲಿಯೂ ಅಕ್ಕಪಕ್ಕದಲ್ಲಿರುವವರು ತುಂಬ ಗರೀಬರು. ಅಂತಹವರಿಗೆ ಆರೋಗ್ಯವನ್ನು ಕಾಪಾಡಿಕೊಳ್ಳಲು ಒಳ್ಳೆಯ ಡಿಸ್ಪೆನ್ಸರಿ ಅಥವಾ ಆಸ್ಪತ್ರೆಗಳನ್ನು ಕಟ್ಟಿಕೊಡಬೇಕು. ದೊಡ ದೊಡ್ಡ ಕಡೆ ಅಂದರೆ ಬೆಂಗಳೂರು, ಮೈಸೂರು, ಮಂಗಳೂರು ಮತ್ತು ಮಣಿಪಾಲ್‌ಗಳಲ್ಲಿಯೂ ಮತ್ತು ಹುಬ್ಬಳ್ಳಿ ಮುಂತಾದ ಸ್ಥಳಗಳಲ್ಲಿ ದೊಡ್ಡ ದೊಡ್ಡ ಆಸ್ಪತ್ರೆಗಳಿವೆ. ಅವುಗಳ ಬಗ್ಗೆ ನಿಮ್ಮ ಸಂಪೂರ್ಣ ಹತೋಟಿ ಇರಬೇಕು. ಆದರೆ ನನ್ನ ಮಾನ್ಯ ಸ್ನೇಹಿತರಾದ ಪಾಟೀಲ್ ಅವರು ಹೇಳಿದ ಹಾಗೆ ಕೆಲವಾರು ಸ್ಥಳಗಳಲ್ಲಿ ಪ್ರವಾಸಮಾಡಿದಾಗ, ಕ್ಯಾಪಿಟೇಷನ್ ಫೀಸ್ ಎಂಬುದಾಗಿ ವಸೂಲು ಮಾಡುತ್ತಿದ್ದಾರೆಂದು ಹೇಳಿದರು. ಅದನ್ನು ಎಲ್ಲಿಯವರೆಗೆ ನೀವು ತೆಗೆದುಕೊಳ್ಳುವುದನ್ನು ನಿಲ್ಲಿಸುವುದಿಲ್ಲವೋ ಅಲ್ಲಿಯವರೆಗೆ ನಿಮ್ಮ ಯೋಜನೆಗಳು ಯಾವುದೂ ಯಶಸ್ವಿಯಾಗುವುದಿಲ್ಲ. ಸಕ್ಸೆಸ್ ಆಗುವುದಿಲ್ಲ. ಶೇಕಡ ೮೦ರಷ್ಟು ಮೇಂಟನೆನ್ಸ್ ಗ್ರ್ಯಾಂಟ್ ಅವುಗಳಿಗೆ ಕೊಡುವಾಗ ಕೇವಲ ಶೇಕಡ ೨೦ರಷ್ಟು ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಕೊಟ್ಟು ಅವನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಅವುಗಳ ಆಡಳಿತವನ್ನು ಸಂಪೂರ್ಣವಾಗಿ ಹತೋಟಿ ಇಟ್ಟುಕೊಳ್ಳುವುದಕ್ಕೆ ಏಕೆ ಪ್ರಯತ್ನ ಮಾಡಬಾರದು? ಇದು ಪರಮ ಆಶ್ಚರ್ಯವಾದ ವಿಚಾರ. ಇದು ಬಹಳ ವಿಷಾದವಾದ ವಿಷಯ. ಒಟ್ಟಿನಲ್ಲಿ ಈಗ ಈ ಬಿಲ್ಲಿಗೆ ಸಂಬಂಧಪಟ್ಟ ಹಾಗೆ ಮೂಲಭೂತವಾದ ಬದಲಾವಣೆಗಳನ್ನು ಮಾಡಿದರೆ ಮಾತ್ರ ಇದು ಸಂಪೂರ್ಣವಾಗಿ ಯಶಸ್ವಿಯಾಗುತ್ತದೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ) —ಸನ್ಮಾನ್ಯ ಅಧ್ಯಕ್ಷರೇ, ಹಿರಿಯರು, ಅನುಭವಿಗಳೂ ಆದಂಥ ಶ್ರೀಮಾನ್ ಚನ್ನಬಸಪ್ಪನವರು ಆರೋಗ್ಯ ಸಚಿವರು ಆದಮೇಲೆ ಪ್ರತ್ಯೇಕವಾಗಿ ನರ್ಸಿಂಗ್‌ಹೋಂ ಬಗ್ಗೆ ತಂದಿರುವ ವಿಧೇಯಕವನ್ನು ನಾನು ಸ್ವಾಗತಮಾಡಲೇ ಬೇಕಾಗಿದೆ. ಏಕೆಂದರೆ ಅವರು ಬಿಚ್ಚುಮನಸ್ಸಿನಿಂದ ಹಾಗೂ ತುಲನಮಾಡಿದಂಥ ಸಮಸ್ಯೆಯನ್ನು ಈ ಬಿಲ್ಲಿನಲ್ಲಿ ಅಡಕಮಾಡಿ ನಮ್ಮ ಮುಂದೆ ಇವತ್ತು ತಂದಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಯಾವಾಗಲೂ

ರೋಗರುಜಿನಗಳಿಗೊಳಗಾದಂಥ ಯಾವನೇ ಒಬ್ಬ ವ್ಯಕ್ತಿ ತಾನು ತನ್ನ ಪ್ರಾಣವನ್ನು ಉಳಿಸಿಕೊಳ್ಳುವುದಕ್ಕೆ ಹೇಗಾದರೂ ಪ್ರಯತ್ನ ಮಾಡುತ್ತಾನೆ. ಅಂತಹ ಒಂದು ಪರಿಸ್ಥಿಯಲ್ಲಿ ಏನಾದರೂ ಆಗಲಿ, ತನ್ನ ಆಸ್ತಿ ಪಾಸ್ತಿ ಹೋಗಲಿ, ತನ್ನ ಹೆಂಡತಿ, ಮಕ್ಕಳ ಮೈಮೇಲಿರುವ ಆಭರಣಗಳಾದರೂ ಹೋಗಲಿ ತಾನು ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂಬ ಚಿಂತನೆಯಲ್ಲಿಯೇ ಇರುತ್ತಾನೆ. ನನಗೆ ತಿಳಿದು ಬಂದಿರುವ ಹಾಗೆ ಅನೇಕ ಮಂತ್ರಿಗಳಿಗೆ ಕಾಯಿಲೆ ಬಂತು. ಶ್ರೀಮಾನ್ ಚನ್ನಬಸಪ್ಪನವರಿಗೂ ಹಾಗೂ ಮಾನ್ ಶ್ರೀ ಮಲ್ಲಿಕಾರ್ಜುನಸ್ವಾಮಿಯವರಿಗೂ ಕಾಯಿಲೆ ಬಂದಿತ್ತು. ಅವರು ಗುಣಮುಖರಾದರು. ನಮ್ಮ ಮಾನ್ಯ ಶ್ರೀ ಮಲ್ಲಿಕಾರ್ಜುನಸ್ವಾಮಿಯವರಿಗೆ ಪೆರಾಲಿಸಸ್ ಸ್ಟ್ರೋಕ್ ಹೊಡೆದಿತ್ತು. ಅವರೂ ಸಹ ಗುಣಮುಖ ರಾಗಿದ್ದಾರೆ. ಆದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಯಾವ ಕಾಯಿಲೆಯೂ ಇದುವರೆಗೆ ಬಂದಿಲ್ಲ. ಚೆನ್ನಾಗಿ ಕುಸಿಗಿಸ್ತಿಮಾಡಿ ಅವರು ತಮ್ಮ ದೇಹದಾರ್ಢ್ಯವನ್ನು ಚೆನ್ನಾಗಿ ಉಳಿಸಿಕೊಂಡಿದ್ದಾರೆ. ಅದನ್ನು ಅವರು ತಮ್ಮ ಆತ್ಮದಲ್ಲಿಯೇ ನೆನೆಸಿಕೊಂಡಿದ್ದಾರೆಂದು ನನಗೆ ತೋರುತ್ತದೆ. ಅಂತಹ ಆರೋಗ್ಯ, ಶಕ್ತಿ ಬೇರೆಯವರಿಗೆ ಹೇಗೆ ಬರಬೇಕು ? ಆ ವಿಷಯ ಬಡವ-ಬಲ್ಲಿದನಿಗೆ ಹಾಗೂ ಕರ್ನಾಟಕ ಜನರಿಗೆ ಗೊತ್ತಿದೆ ಆ ವಿಚಾರದ ಬಗ್ಗೆ ನೀವು ಯಾರೇ ಆಗಲಿ ಎದೆ ಮುಟ್ಟಿಕೊಂಡು ತಂತಮ್ಮ ಆತ್ಮವನ್ನು ತುಲನಮಾಡಿಕೊಂಡು ಹೇಳಲಿ ನನಗೆ ತಿಳಿದಹಾಗೆ ಮಾನ್ಯ ಶ್ರೀ ಚನ್ನಬಸಪ್ಪನವರು ಲಂಚಕೋರರು ಅಲ್ಲದೇ ಇದ್ದರೂ, ಅವರು ಒಂದು ಸಾಮರ್ಥ್ಯದಿಂದ ಒಳ್ಳೆಯ ವ್ಯಕ್ತಿಯೆಂದು ಎನಿಸಿಕೊಂಡಿದ್ದಾರೆ. ಅಂತಹ ವ್ಯಕ್ತಿ ತೆಗೆದುಕೊಂಡಿರತಕ್ಕ ಖಾತೆಯ ಬಗ್ಗೆ ಒಂದು ಮಾತು. ಕೇವಲ ಆಸ್ಪತ್ರೆಗಳಿಗೆ ರೋಗಿ ಬಂದರೆ ಅವನು ಅಲ್ಲಿ ಮಲಗುವುದಕ್ಕೆ ಸರಿಯಾಗಿ ಹಾಸಿಗೆ ಇಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.— ನನಗೆ ಸ್ವಲ್ಪ ಟೈಂ ಕೊಡಿ., ಅವನ್ನೆಲ್ಲಾ ಸರಿಮಾಡುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಈಗ ೬೦ ಆಗಿದೆ. ಇನ್ನು ವಾಯಿಂದೆ ಎಷ್ಟು ಕೊಡೋಣ ಕ್ಷಣ ಮಾತ್ರದಲ್ಲಿ ಯಕ್ಷಿಣಿ ಮಾಡುವೆನೆಂದು ಹೇಳುವ ನೀವು.........

ಶ್ರೀ ಡಿ. ದೇವರಾಜ್ ಅರಸ್.— ಅಂತಹವರು ೫೦ ಸಾವಿರ ಜನರು ಇದ್ದಾರೆ. ಅವರಿಗೆಲ್ಲರಿಗೂ ಅಂತಹ ಸೌಲಭ್ಯವನ್ನು ಮಾಡಿಕೊಡಲೇ ಬೇಕು.

ಶ್ರೀ ಬಿ. ಪುಟ್ಟಸ್ವಾಮಯ್ಯ .— ನಾನು ಏತಕ್ಕೆ ಆ ಮಾತನ್ನು ಹೇಳುತ್ತಿದ್ದೇನೆಂದರೆ ಸಮಾಜದಲ್ಲಿ ಹೆಚ್ಚಿನ ಜವಾಬ್ದಾರಿಯನ್ನು ಹೊತ್ತಿರತಕ್ಕ ಸರ್ಕಾರದ ಆಡಳಿತವನ್ನು ನಿರ್ವಹಿಸುವ ಅನುಭವ ಆಡಳಿತಗಾರ ರಾಗಿರುವ ನೀವು ನಿಮ್ಮ ಆಸ್ಪತ್ರೆಗಳನ್ನು ಸುರಕ್ಷಿತವಾಗಿ ನಡೆಸುತ್ತಿದ್ದರೆ, ಅಲ್ಲಿನ ಉಪಚಾರ, ಔಷಧಿ ಸರಬರಾಜು ಸರಿಯಾಗಿದ್ದಿದ್ದರೆ ನಿಜವಾಗಿಯೂ ಕರ್ನಾಟಕದ ಪ್ರಜೆಗಳು ರೋಗರುಜಿನಗಳಿಗಾಗಿ ಖಾಸಗಿ ನರ್ಸಿಂಗ್‌ಹೋಂಗಳಿಗೆ ಹೋಗುವ ಪರಿಸ್ಥಿತಿಯೇ ಇರುತ್ತಿರಲಿಲ್ಲ. ಆದ್ದರಿಂದ ನಾನು ತಮಗೆ ನಮ್ರತೆಯಿಂದ ಒಂದು ಮಾತನ್ನು ಹೇಳುತ್ತಿದ್ದೇನೆ. ಶ್ರೀಮಂತರು ಮಾತ್ರವೇ ನರ್ಸಿಂಗ್ ಹೋಂಗಳಿಗೆ ಹೋಗುವುದಿಲ್ಲ. ಬಡವರು ಸಹ ಹೋಗಬೇಕಾಗುತ್ತದೆ. ಹೆಂಡತಿ ತಾಳಿಯನ್ನಾದರೂ ಅಡವಿಟ್ಟು ಅಲ್ಲಿಗೆ ಹೋಗುತ್ತಾರೆ. ಅಂತಹವರ ಶಾಪ ನಿಮಗೆ ನಿಜವಾಗಿ ತಗಲುತ್ತದೆ. ರೋಗಿಯಾದವನು ತಾನು ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕು. ತನ್ನ ಹೆಂಡತಿ, ಮಕ್ಕಳ ಆಭರಣಗಳನ್ನು ಮಾರಿಯಾದರೂ ಜೀವವನ್ನು ಕಾಪಾಡಿಕೊಳ್ಳಬೇಕೆಂದು ಹೇಳಿ ಅಲ್ಲಿಗೆ ಹೋಗತಕ್ಕ ಬಡವರ ಅನುಕಂಪ ಸರ್ಕಾರಕ್ಕೆ ನಿಜವಾಗಿ ಗೊತ್ತಾಗುತ್ತದೆಯೋ ಇಲ್ಲವೋ ನನಗೆ ತಿಳಿಯುತ್ತಿಲ್ಲ. ಇದರಿಂದಲೇ ಎಲ್ಲೋ ಅವರ ಶಾಪ ಇವರಿಗೆ ತಗಲುವುದರಲ್ಲಿ ಸಂದೇಹವೇ ಇಲ್ಲ.

ಶ್ರೀ ಡಿ. ದೇವರಾಜ್ ಅರಸ್.— ನಮಗೆ ತಗಲುವುದಕ್ಕೆ ಮುಂಚೆ ಡಾಕ್ಟರುಗಳಿಗೆ ತಗಲಬೇಡವೇ?

ಶ್ರೀ ಬಿ. ಪುಟ್ಟಸ್ವಾಮಯ್ಯ .— ಸಾವಿರಾರು ಜನರನ್ನು ನಿರುದ್ಯೋಗಿಗಳಾಗಿ ಮಾಡಿರುವುದರಿಂದ ಅದು ಮೊದಲು ನಿಮಗೆ ತಗಲಬೇಕು. ನಿರುದ್ಯೋಗಿ ಡಾಕ್ಟರುಗಳಾಗಿರುವ ಜನ ಈಗ ನಾಲ್ಕುಸಾವಿರ ಇದ್ದಾರೆ ಅದಕ್ಕೆ ಕಾರಣರಾಗಿರತಕ್ಕ ನಿಮ್ಮ ಸರ್ಕಾರಕ್ಕೆ ಯಾವ ನೈತಿಕ ನೀತಿ ಇದೆಯೆಂದು ನಾನು ಪ್ರಶ್ನೆ ಮಾಡುತ್ತೇನೆ.

ಶ್ರೀಮಾನ್ ದೇವರಾಜ್ ಅರಸ್ ರವರು ಘಾತುಕತನದಿಂದ ನಮ್ಮ ಕಡೆಯವರನ್ನು ಒಡೆದುಕೊಂಡು ೧೭೨ ಜನ ಇದ್ದದ್ದನ್ನು ೧೮೫ಕ್ಕೆ ಏರಿಸಿ ಅವರ ಕೌರವ ಸೈನ್ಯವನ್ನು ಬಲಪಡಿಸಿಕೊಂಡಿದ್ದಾರೆ. ಅಂತಹವರು ನನ್ನ ಬಗ್ಗೆ ಅನುಮಾನ ಪಡುವುದು ಯುಕ್ತವೆ, ಇದನ್ನು ಮಾನ್ಯ ಅರಸ್‌ರವರು ಆಲೋಚನೆ ಮಾಡಬೇಕು. ಆದುದರಿಂದ ಮಾನ್ಯ ಅಧ್ಯಕ್ಷರೇ,

ಶ್ರೀ ಡಿ. ದೇವರಾಜ್ ಅರಸ್.—ತಾವು ನಮ್ಮ ಕಡೆ ಸೇರುವವರಿದ್ದೀರೇನು ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾನು ಮಾತ್ರ ಈ ಜನ್ಮದಲ್ಲೀ ಅದು ಸಾಧ್ಯವಿಲ್ಲ. ತಮ್ಮ ಕಡೆಗೆ ಬಂದವರು ಒದ್ದಾಡುತ್ತಿದ್ದಾರೆ. ಇನ್ನೊಂದು ಸಂತೋಷದ ವಿಷಯವೇನೆಂದರೆ ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿ ಇದ್ದಾರೆ. ಮಾನ್ಯ ಚೆನ್ನಬಸಪ್ಪನವರು ದಕ್ಷರು ಇದ್ದಾರೆ. ಆದ್ದರಿಂದ ಈ ಆರೋಗ್ಯ ಇಲಾಖೆಯನ್ನು ಶುದ್ಧೀಕರಣ ಮಾಡುತ್ತಾರೆಂದು ತಿಳಿದು ಮಾನ್ಯ ಅರಸ್‌ರವರು ಇದನ್ನು ಅವರಿಗೆ ವಹಿಸಿದ್ದಾರೆಂದು ತಿಳಿದುಕೊಂಡಿದ್ದೇನೆ ದಯಮಾಡಿ ಮಾನ್ಯ ಚೆನ್ನಬಸಪ್ಪನವರನ್ನು ಕೇಳಿಕೊಳ್ಳುವುದು ಈಗ ಕ್ಯಾಪಿಟೇಷನ್ ಫೀ ಏನು ಇದೆ ಅದನ್ನು ಮೊದಲು ತೆಗೆಯಬೇಕು. ಆದರೆ ಅದನ್ನು ತೆಗೆದು ಹಾಕುವುದಕ್ಕೆ ಹೊರಟರೆ ನಿಮ್ಮ ಸರ್ಕಾರವೇ ಕಿತ್ತುಹೋಗುತ್ತದೋ ಏನೋ ?

ಉಪಾಧ್ಯಕ್ಷರು.—ತಾವು ಯಾವ ಉದ್ದಿಶ್ಯ ಇಟ್ಟುಕೊಂಡು ಮಾತನಾಡುತ್ತೀರಿ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅವರ ಬಲ ಜಾಸ್ತಿ ಇರುತ್ತದೆ. ಆದರೆ ಜನ ಮತ್ತು ಪ್ರಜೆಗಳ ಪುರಸ್ಕಾರದಿಂದ ತಾವು ತ್ಯಾಗ ಮಾಡಬೇಕು, ಜೊತೆಗೆ ಮನಃಸ್ಥೈರ್ಯ ಬರಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧ ಮತ್ತು ಸಲಕರಣೆಗಳು ಸಿಕ್ಕುವಂತೆ ಮಾಡಬೇಕು. ರಾತ್ರಿಹೊತ್ತು ಆಸ್ಪತ್ರೆಗಳಿಗೆ ರೋಗಿಗಳು ಹೋದರೆ ಅವರನ್ನು ಕೇಳುವವರೇ ಇರುವುದಿಲ್ಲ. ತಾವು ದಯಮಾಡಿ ಅನಿರೀಕ್ಷಿತವಾಗಿ ಹೋದರೆ ಅಲ್ಲಿನ ನಡವಳಿಕೆ ತಮಗೆ ಗೊತ್ತಾಗುತ್ತದೆ. ಅದರಲ್ಲಿ ಯಾರು ತಪ್ಪು ಮಾಡುತ್ತಾರೆ ಅವರಿಗೆ ಶಿಕ್ಷೆಮಾಡಿ. ಆದರೆ ಕೆಲವು ಒಳ್ಳೆಯ ಡಾಕ್ಟರುಗಳ ಮೇಲೆ ಚಾಡಿ ಹೇಳುವವರಿದ್ದಾರೆಂದು ಕೇಳಿದ್ದೇನೆ. ದಯಮಾಡಿ ಅಂತಹವರನ್ನು ತಮ್ಮ ಹತ್ತಿರ ಸೇರಿಸಕೂಡದೆಂದು ಮನವಿ ಮಾಡುತ್ತೇನೆ. ತಾವು ಇರುವವರೆಗೆ ಈ ಇಲಾಖೆಯನ್ನು ಶುದ್ಧೀಕರಣಮಾಡಿ ಭೇಷ್ ಎನ್ನಿಸಿಕೊಳ್ಳುತ್ತೀರೆಂದು ನಾವು ನಂಬಿದ್ದೇವೆ. ತಾವು ಆ ಕೆಲಸ ಮಾಡದೆ ಹೋದರೆ ಅದರ ಪಾಪ ಜನ್ಮಾಂತರ ಕಳೆದರೂ ತಮಗೆ ಬಿಡುವುದಿಲ್ಲವೆಂದು, ನಿಮ್ಮ ಮೇಲೆ ಇರುತ್ತದೆಂದು ಹೇಳಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ದೇವರಾಜ್ ಅರಸ್‌ರವರು ಇದಕ್ಕೆ ತಮ್ಮ ಪೂರ್ಣ ಬೆಂಬಲವನ್ನು ಕೊಡುತ್ತಾರೆಂದು ತಿಳಿದುಕೊಂಡಿದ್ದೇನೆ. ನಮ್ಮ ರಾಜ್ಯವನ್ನು ಸುಭಿಕ್ಷವಾಗಿ ಕಾಪಾಡುತ್ತಾರೆಂದು, ಅದರ ಜೊತೆಗೆ ನಮ್ಮನ್ನು ಸಾಯಿಸುವುದಕ್ಕೆ ಬಿಡುವುದಿಲ್ಲವೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎನ್. ಎಸ್. ಗುರುದ್ದಪ್ಪ (ಬಿಳಿಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಆರೋಗ್ಯ ಮಂತ್ರಿಗಳು ತಂದಿರತಕ್ಕ ವಿಧೇಯಕದ ಬಗ್ಗೆ ಎರಡು ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಮೊದಲನೆಯದಾಗಿ ನಿಜವಾಗಿಯೂ ಈ ವಿಧೇಯಕವನ್ನು ತರುವ ಅವಶ್ಯಕತೆ ಇತ್ತೇ ? ನರ್ಸಿಂಗ್‌ಹೋಮ್‌ಗಳು ನಿರ್ಮಾಣವಾಗುವುದಕ್ಕೆ ಕಾರಣವಾದರೂ ಇಷ್ಟೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಸರಿಯಾದ ಚಿಕಿತ್ಸೆಗಳು ದೊರೆಯದೆ ಇರುವುದರಿಂದ ಆಸ್ಪತ್ರೆಗಳು ಸರಿಯಾದ ರೀತಿಯಲ್ಲಿ ಕೆಲಸಮಾಡದೆ, ಸರ್ಕಾರಿ ಡಾಕ್ಟರುಗಳು ಸರಿಯಾದ ಟ್ರೀಟ್‌ಮೆಂಟನ್ನು ಜನರಿಗೆ ಕೊಡದೆ ಇರುವುದರಿಂದ ವಿಧಿಯಿಲ್ಲದೆ ಜನರು ನರ್ಸಿಂಗ್ ಹೋಮ್‌ಗಳಿಗೆ ಹೋಗಲೇ ಬೇಕಾದ ಪರಿಸ್ಥಿತಿ ಬಂದಿದೆ. ಇನ್ನು ಎರಡನೇಯದಾಗಿ ಡಾಕ್ಟರ್ ಪರೀಕ್ಷೆ ಪಾಸ್ ಮಾಡಿಕೊಂಡು ಬಂದಂತಹ ಜನರಿಗೆ ಉದ್ಯೋಗ ಸಿಗದೆ ಇರುವುದರಿಂದ ಅವರು ತಮ್ಮ ಜೀವನೋಪಾಯಕ್ಕಾಗಿ ಈ ರೀತಿ ನರ್ಸಿಂಗ್ ಹೋಂಗಳನ್ನು ತೆರೆಯಬೇಕಾದ ಪ್ರಸಂಗ ಬಂತು. ಸರ್ಕಾರಿ ಆಸ್ಪತ್ರೆಗಳಲ್ಲಿ ಓವರ್ ಕ್ರೌಡೆಡ್ ಆಗಿ ಆಸ್ಪತ್ರೆಗೆ ಹೋಗಿ ಒಂದು ಇಂಜಕ್ಷನ್ ತೆಗೆದುಕೊಳ್ಳಬೇಕಾದರೆ ಸುಮಾರು ಮೂರು ಗಂಟೆಗಳ ಕಾಲ ಹೊರಗಡೆ ಕಾಯಬೇಕಾಗುತ್ತದೆ ಸರ್ಕಾರಿ ಆಸ್ಪತ್ರೆಗಳಲ್ಲೂ ಕೂಡ ಹಣದ ಸುಲಿಗೆ ನಡೆಯುತ್ತಿದೆ. ಸರ್ಕಾರ ತನ್ನ ತಪ್ಪನ್ನು ತಿದ್ದಿಕೊಳ್ಳದೆ ಬೇರೆಯವರ ಮೇಲೆ ತಪ್ಪನ್ನು ಹೇರುವುದು ಯಾವ ನ್ಯಾಯತಿವೆಂದು ಕೇಳುತ್ತೇನೆ, ಸರ್ಕಾರ ಹಳ್ಳಿಗಳ ಆಸ್ಪತ್ರೆಗಳಿಗೆ ಯಾವ ಎಕ್ವಿಪ್‌ಮೆಂಟ್ ಕೊಟ್ಟಿದ್ದಾರೆ ? ಆಸ್ಪತ್ರೆಗಳ ಕಟ್ಟಡಗಳು ಹೇಗೆ ಇವೆ ? ಡಾಕ್ಟರುಗಳು ಯಾವರೀತಿ ಇದ್ದಾರೆ ಎಂದು ಯೋಚನೆ ಮಾಡಿದ್ದಾರೆಯೇ ? ಮತ್ತೆ ಎಲ್ಲಾ ಆಸ್ಪತ್ರೆಗಳಲ್ಲಿಯೂ ಎಕ್ಸರೇ ಫಿಲಮ್ ಇವೆಯೇ ? ಎಮರ್‌ಜೆನ್ಸಿಯಲ್ಲಿ ಮುಖ್ಯವಾಗಿ ಬೇಕಾಗುವ ಯಾವ ಒಂದು ಔಷಧವೂ ಕೂಡ ಅಲ್ಲಿ ಸಿಕ್ಕುವುದಿಲ್ಲ. ಇದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಮಾನ್ಯ ಸಚಿವರಾದ ಚೆನ್ನಬಸಪ್ಪನವರ ಕಾಲದಲ್ಲಿಯಾದರೂ ಇದು ಇಂಪ್ರೂವ್ ಆಗಬಹುದು ಎಂದು ನಂಬಿದ್ದೇವೆ. ಮೊದಲು ನಿಜವಾಗಿಯೂ ಗೌರ್ನಮೆಂಟ್ ಆಸ್ಪತ್ರೆಗಳಲ್ಲಿ ಡಾಕ್ಟರುಗಳನ್ನು ನೇಮಿಸಿಕೊಂಡು ಅವರ ನಿರುದ್ಯೋಗವನ್ನು ತಪ್ಪಿಸಿದರೆ ಎಷ್ಟೋ ಮುಗ್ಗಟ್ಟನ್ನು ಪರಿಹಾರ ಮಾಡಿದಂತಾ

ಗಂತ್ತದೆಂದು ನನ್ನ ಅಭಿಪ್ರಾಯ. ಇನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಸರಿಯಾದ ಟ್ರೀಟ್‌ಮೆಂಟ್ ಸಿಗುವ ರೀತಿ ಮಾಡಿ ಆಸ್ಪತ್ರೆಗಳನ್ನು ಇಂಪ್ರೂವ್ ಮಾಡಬೇಕೆಂದು ಹೇಳಿ ಇಷ್ಟನ್ನು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಮಾನ್ಯ ಅಧ್ಯಕ್ಷರೇ, ಒಂದು ಸಂತೋಷದ ಸಂಗತಿ ಎಂದರೆ ಸಭೆಯ ಎಲ್ಲಾ ಭಾಗಗಳಿಂದ ಈ ಒಂದು ವಿಧೇಯಕಕ್ಕೆ ಸಂಪೂರ್ಣವಾದ ಬೆಂಬಲ ಬಂದಿದೆ. ಬೆಂಬಲ ಕೊಡುವಾಗ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಟೀಕಾ ರೂಪದಲ್ಲಿ ಕೊಟ್ಟಿದ್ದಾರೆಂದು ನಾನು ಭಾವಿಸುವುದಿಲ್ಲ. ಈ ಇಲಾಖೆ ಇನ್ನೂ ಉತ್ತಮವಾಗಬೇಕೆಂಬ ಉದ್ದೇಶದಿಂದ, ಸಫಲವಾಗಬೇಕೆಂಬ ಉದ್ದೇಶದಿಂದ ಎಲ್ಲರೂ ಕಾತುರರಾಗಿದ್ದಾರೆ. ಮೊಟ್ಟಮೊದಲು ಮಾನ್ಯ ಶಾಮಣ್ಣನವರು ಮಾತನಾಡುವಾಗ ನಾನು ತಿಳಿದೆ ಇವರು ಏತಕ್ಕೆ ಈ ವಿಧೇಯಕವನ್ನು ವಿರೋಧ ಮಾಡುವುದಕ್ಕೆ ಶುರು ಮಾಡಿದರು ಎಂದು. ಆದರೆ ಅವರು ವಿಧೇಯಕವನ್ನು ವಿರೋಧ ಮಾಡಲಿಲ್ಲ. ಈ ಸುಗ್ರೀವಾಜ್ಞೆಯನ್ನು ಏತಕ್ಕೆ ತಂದಿದ್ದೀರಿ ? ಈ ಸುಗ್ರೀವಾಜ್ಞೆಯನ್ನು ತರುವಂತಹ ಅಗತ್ಯವೇನಿತ್ತು ? ಎಲ್ಲಾ ಕಾನೂನುಗಳನ್ನು ತರುವಂತೆ ತಂದಿದ್ದರೆ ಏನಾಗುತ್ತಿತ್ತು ಎಂದು ಕೇಳಿದರು. ನಾವು ಯಾವಾಗಲೂ ಒಂದು ಒಳ್ಳೆಯ ಕೆಲಸ ಮಾಡಬೇಕಾದರೆ ಅದನ್ನು ಇವತ್ತೇ ಮಾಡಬೇಕು. ಯಾವುದಾದರೂ ಕೆಟ್ಟ ಕೆಲಸ ಮಾಡಬೇಕಾದರೆ ನಾಳೆ ಮಾಡಬಹುದು. ಒಳ್ಳೆಯ ಕೆಲಸ ಮಾಡುವಾಗ ಯಾವಾಗಲೂ ನಿಧಾನ ಮಾಡಬಾರದು ಅದು ಒಳ್ಳೆಯದಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಯಾವತ್ತೋ ಸುಗ್ರೀವಾಜ್ಞೆಯನ್ನು ಮಾಡಿ ನೆನ್ನೆ ಏತಕ್ಕೆ ಜಾರಿಗೆ ಕೊಟ್ಟಿರಿ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಇಷ್ಟು ಬೇಗ ನಾವು ತಂದಿದ್ದೇವೆಂದು ಸಂತೋಷ ಪಡಬೇಕು. ಸುಗ್ರೀವಾಜ್ಞೆಯನ್ನು ತಂದ ದಿನದಿಂದಲೇ ಆಗಬೇಕಾದರೆ ಅದು ಬಹಳ ಒಳ್ಳೆಯ ಕೆಲಸ ಆದ್ದರಿಂದ ಅದು ಆಗಲೇಬೇಕು. ನರ್ಸಿಂಗ್ ಹೋಂಗಳನ್ನು ಹತೋಟಿಗೆ ತರಬೇಕಾದರೆ ಇದನ್ನು ತರಲೇ ಬೇಕಾಯಿತು. ಸರ್ಕಾರಿ ಆಸ್ಪತ್ರೆಗಳಲ್ಲ ಸಾಕಷ್ಟು ಪ್ರಮಾಣದಲ್ಲಿ ಸಾಮಾನ್ಯ ಜನರಿಗೆ ಟ್ರೀಟ್‌ಮೆಂಟ್ ಸಿಗುತ್ತಾ ಇಲ್ಲವೆಂದು ಹೇಳಿದ್ದಾರೆ.

ಇವತ್ತು ಬಡವರಾಗಿರತಕ್ಕಂಥವರು ಕೂಡ ಹಣ ಸುರಿದು ಪ್ರೈವೇಟ್ ನರ್ಸಿಂಗ್ ಹೋಂಗೆ ಹೋಗಬೇಕಾದ ಪ್ರಸಂಗ ಬಂದಿದೆ ಎನ್ನುವುದು ಮೊದಲನೆಯದು ಇನ್ನು ಎರಡನೆಯದು ೫೦ ಸಾವಿರ, ೭೦ ಸಾವಿರ, ಲಕ್ಷ ರೂಪಾಯಿಗಳ ಕ್ಯಾಪಿಟೇಷನ್ ಫೀ ಕೊಟ್ಟು ಅವರು ಡಾಕ್ಟರ್ ಆಗುವುದಕ್ಕಿಂತ ಮುಂಚಿತವಾಗಿಯೇ ಆ ಹಣವನ್ನು ಹೇಗೆ ವಸೂಲು ಮಾಡಬೇಕು ಎನ್ನುವ ಬಗ್ಗೆ ಆಲೋಚನೆ ಮಾಡಿಯೇ ಡಾಕ್ಟರ್ ಕೆಲಸವನ್ನು ಶುರು ಮಾಡುತ್ತಾರೆ. ಈ ಕ್ಯಾಪಿಟೇಷನ್ ಫೀ ಯಿಂದಲೇ ಇವತ್ತಿನ ದಿವಸ ಅವರು ಸುಲಿಗೆ ಮಾಡುವುದಕ್ಕೆ ಕಾರಣವಾಗಿದೆ. ಮೂರನೆಯದು ಏನೆಂದರೆ ನಾವು ಏನಾದರೂ ಕಾನೂನು ಮಾಡುತ್ತೇವೆಂದು ಹೊರಟರೆ, ನಾವು ಚಾಪೆಕೆಳಗೆ ನುಸುಳಿದರೆ ಅವರು ರಂಗೋಲಿ ಕೆಳಗೆ ನುಸುಳುವುದಕ್ಕೆ ಪ್ರಯತ್ನ ಮಾಡತಕ್ಕಂಥ ಜನರಿದ್ದಾರೆ. ಸುಳ್ಳು ಲೆಕ್ಕ ಪತ್ರಗಳನ್ನು ತೋರಿಸಿ ಹಣ ಪಡೆಯುತಕ್ಕಂಥವರೂ ಇದ್ದಾರೆ ಎನ್ನುವುದು ವಾಸ್ತವಾಂಶ ಅದರಲ್ಲಿ ಏನೂ ತಪ್ಪಿಲ್ಲ. ರೂರಲ್ ಮೆಡಿಕಲ್ ಕೇರ್ ಇದು ಪಟ್ಟಣಗಳ ವಿಷಯವಾಯಿತು. ಇನ್ನು ಹಳ್ಳಿಗಾಡಿನಲ್ಲಿರತಕ್ಕ ಜನಗಳ ಪರಿಸ್ಥಿತಿ ಏನಿದೆ ಎಂಬುದನ್ನು ನಾವು ನೋಡುವುದಾದರೆ, ಹಳ್ಳಿಗಾಡಿನಲ್ಲಿ ಆಳಲೇ ಕಾಯಿ ಪಂಡಿತರುಗಳು ಏನಿದ್ದಾರೆ ಅವರ ಗತಿ ಏನು, ಎನ್ನತಕ್ಕಂಥ ಸಮಸ್ಯೆ ಬರುತ್ತದೆ. ಇವುಗಳ ಬಗ್ಗೆ ಎಲ್ಲಾ ನಾವು ಇವತ್ತಿನ ದಿವಸ ಒಂದು ಶಾಸನ ಮಾಡಿ ತಮ್ಮ ಮುಂದೆ ಇಟ್ಟಿದ್ದೇವೆ ಅದು ಅಷ್ಟು ಸರಿಯಾಗಿದೆಯೆಂದು ನಾನು ಹೇಳುವುದಕ್ಕೆ ತಯಾರಾಗಿಲ್ಲ. ಆದುದರಿಂದ ತಾವು ಇವತ್ತಿನ ದಿವಸ ಏನು ಸಲಹೆಗಳನ್ನು ಕೊಟ್ಟಿದ್ದೀರಿ ಅವು ಸೂಕ್ತವಾದ ಸಲಹೆಗಳಾಗಿವೆಯೇ ವಿನಹ ಅದರಲ್ಲಿ ಟೀಕೆ ಟಿಪ್ಪಣಿ ಮಾಡತಕ್ಕಂಥ ಸಲಹೆಗಳೇನೂ ಆಗಿಲ್ಲ. ನಿಜವಾದ ವಾಸ್ತವಾಂಶವನ್ನು ತಮಗೆ ಇಲ್ಲಿ ಹೇಳುವುದಾದರೆ ಶೇಕಡ ೮೦ ರಷ್ಟು ಡಾಕ್ಟರುಗಳು ಪಟ್ಟಣಗಳಲ್ಲಿ ಸೇರಿಕೊಂಡಿದ್ದಾರೆ. ಇನ್ನು ಕೇವಲ ೨೦ ರಷ್ಟು ಜನರು ೮೦ ರಷ್ಟು ಹಳ್ಳಿಗಾಡಿನಲ್ಲಿರತಕ್ಕಂಥ ಜನಗಳಿಗೆ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇದು ಅಷ್ಟು ಏರುಪೇರು ಆಗಿದೆ ಎನ್ನುವುದರಲ್ಲಿ ಭಿನ್ನಾಭಿಪ್ರಾಯವೇ ಇಲ್ಲ. ಇದು ಇವತ್ತು ನೆನ್ನೆಯದು ಅಲ್ಲ, ಅನೇಕ ವರ್ಷಗಳಿಂದ ಬೆಳೆದುಕೊಂಡು ಬಂದುಬಿಟ್ಟಿದೆ ಇದಕ್ಕೆ ಯಾರು ಕಾರಣರು ಎಂದು ಹೇಳುವುದಕ್ಕೆ ಹೇಗೆ ಸಾಧ್ಯ? ಹಲವಾರು ವರ್ಷಗಳಿಂದ ಬೆಳೆದುಕೊಂಡು ಬಂದಿರುವುದನ್ನು ತಡೆಗಟ್ಟುವುದಕ್ಕೆ ನಾವೆಲ್ಲರೂ

ಸೇರಿ ಅದನ್ನು ಸರಿಪಡಿಸುವುದಕ್ಕೆ ಕೆಲಸ ಮಾಡಬೇಕಾಗಿದೆ. ಇವತ್ತು ಹಳ್ಳಿಗಾಡಿನ ಮೆಡಿಕಲ್ ಕೇರ್ ಉತ್ತಮಗೊಳ್ಳಬೇಕಾಗಿದೆ. ಬೆಂಗಳೂರು, ಮೈಸೂರು, ಇಂಥ ದೊಡ್ಡದೊಡ್ಡ ಪಟ್ಟಣಗಳಲ್ಲಿ ಇವತ್ತು ೨೦೦, ೩೦೦, ೮೦೦ ಬೆಡ್‌ಗಳಿದ್ದರೂ ಸಾಕಾಗುತ್ತಿಲ್ಲ. ಕಟ್ಟಡದ ಮೇಲೆ ಕಟ್ಟಡಗಳು ಬೆಳೆಯುತ್ತಿವೆ. ಪಟ್ಟಣದ ಜನತೆಯು ಒತ್ತಡಕ್ಕೆ ಮೀರಿ ಹೋಗಿರುವುದರಿಂದ ಅವು ಬೇಕು ಅಂಥ ಸಾಧಗಳಿಗೆ ತಕ್ಕಂತೆ ಒಳ್ಳೊಳ್ಳೆಯ ಇನ್‌ಸ್ಟ್ರುಮೆಂಟ್‌ಗಳೂ ಬೇಕು. ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಅದೇ ರೀತಿ ನಾವು ಹಳ್ಳಿಗಳಲ್ಲಿಯೂ ಮಾಡುವುದಕ್ಕಾಗುವುದಿಲ್ಲ. ಆದರೆ ಸಾಮಾನ್ಯವಾಗಿ ಜನಗಳಿಗೆ ಬೇಕಾದಂಥ ಔಷಧಿಗಳು, ಮತ್ತು ಅತ್ಯಾವಶ್ಯಕವಾಗಿ ಆಪರೇಷನ್ನಿಗೆ ಬೇಕಾದಂಥ ಸಲಕರಣೆಗಳು ಸಿಕ್ಕರೆ ಹಳ್ಳಿಗಾಡಿನಿಂದ ಬರತಕ್ಕಂಥ ಜನಗಳ ಒತ್ತಡವೇನಿದೆ ಅದನ್ನು ಸರ್ಕಾರದವರು ದೃಷ್ಟಿಯಲ್ಲಿಟ್ಟುಕೊಂಡು ಮುಂದೆ ಯಾವ ರೀತಿಯಾಗಿ ಇದನ್ನು ವಿಕೇಂದ್ರೀಕರಣ ಮಾಡಬೇಕು ಎನ್ನುವುದರ ಬಗ್ಗೆ ತೀವ್ರಗತಿಯಿಂದ ಯೋಚನೆ ಮಾಡುತ್ತಿದ್ದೇವೆ ಎಂದು ಈ ಸಭೆಯಲ್ಲಿ ಆಶ್ವಾಸನೆ ಕೊಡುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಎಲ್ಲಾ ಹಳ್ಳಿಗಳಿಗೂ ಡಾಕ್ಟರ್‌ಗಳನ್ನು ಕಳುಹಿಸಿಕೊಡಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಳ್ಳಿಗಳಿಗೆ ಡಾಕ್ಟರ್‌ಗಳನ್ನು ಕಳುಹಿಸುವುದಕ್ಕೆ ಈಗ ಸ್ವಲ್ಪ ಕಷ್ಟವಾಗಿದೆ. ಅದು ಏನೆಂದರೆ ಇವತ್ತು ಹಳ್ಳಿಗಳಿಗೆ ಡಾಕ್ಟರ್ ಹೋಗಬೇಕಾದರೆ ಅವರಿಗೆ ಅಲ್ಲಿ ಕನಿಷ್ಠ ಪಕ್ಷ ಒಂದು ಮನೆಯಾದರೂ ಇರಬೇಕು. ಇವತ್ತು ಹಳ್ಳಿಗಳಲ್ಲಿ ಡಾಕ್ಟರ್‌ಗಳಿಗೆ ಇರಲಿಕ್ಕೆ ಮನೆಯನ್ನು ಕಟ್ಟಿಸಿ ಕೊಡಬೇಕಾದ್ದು ನಮ್ಮ ಕರ್ತವ್ಯವಿದೆ ಆದಕೋಸ್ಕರ ನಾನು ಈಗಾಗಲೇ ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದೇನೆ. ಅದನ್ನು ಕಾರ್ಯಗತ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇನೆ. ಹಿಂದೆ ಯಾವ ರೀತಿ ಹಳ್ಳಿಗಾಡಿನಲ್ಲಿ ರಸ್ತೆಗಳು, ಸೇತುವೆಗಳು ಆಗಬೇಕೆಂದು ಫಂಡ್ ಮಾಡಿದ್ದೇವೋ ಅದೇ ರೀತಿ ಹಳ್ಳಿಗಾಡಿನಲ್ಲಿ ಔಷಧಿಗಳಿಗೆ, ಡಾಕ್ಟರ್‌ಗಳಿಗೆ ವಾಸಕ್ಕೆ ಮನೆ ಮುಂತಾದ ಅತ್ಯಾವಶ್ಯಕ ಕೆಲಸಗಳಿಗೆ ಹಣವನ್ನು ಖರ್ಚು ಮಾಡಲು ಒಂದು ವಿಶೇಷ ನಿಧಿಯನ್ನು ಮಾಡಬೇಕೆಂದು ಸರ್ಕಾರ ಯೋಚನೆ ಮಾಡುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಹೆಲ್ತ್ ಸೆಸ್ ಇದೆಯಲ್ಲಾ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೆಲ್ತ್ ಸೆಸ್ ಬಡ್ಜೆಟ್‌ನಲ್ಲಿಯೇ ಹೊರಟು ಹೋಗುತ್ತದೆ. ಇವತ್ತು ನಾವು ಈ ವಿಶೇಷ ನಿಧಿಯಿಂದ ಹಣವನ್ನು ಹಳ್ಳಿಗಾಡಿಗೆ ಮಾತ್ರ ಉಪಯೋಗಿಸಿಲ್ಲ ಅಲ್ಲಿ ಡಾಕ್ಟರ್‌ಗಳಿಗೆ ವಸತಿ ಸೌಕರ್ಯವನ್ನು, ಮತ್ತು ಔಷಧಿಗಳಿಗೆ ಖರ್ಚು ಮಾಡಬೇಕು ಎನ್ನುವ ಬಗ್ಗೆ ತೀವ್ರವಾಗಿ ಆಲೋಚನೆ ಮಾಡುತ್ತಿದ್ದೇವೆ. ಆದಷ್ಟು ಬೇಗ ಇದರ ಬಗ್ಗೆ ಒಂದು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದವರು ಯೋಚನೆ ಮಾಡುತ್ತಿದ್ದೇವೆ. ಮತ್ತೆ ಹಳ್ಳಿಗಾಡಿನಲ್ಲಿ ತಾವು ಹೇಳಿದ ಹಾಗೆ ಅನೇಕರು ಟ್ರೈನಿಂಗ್ ಇಲ್ಲದೇ ಇರತಕ್ಕಂಥವರು ಇದ್ದಾರೆ, ಅವರ ಮೇಲೆ ಯಾವ ವಿಧವಾದಂಥ ಹತೋಟಿಯೇ ಇಲ್ಲ. ಆದುದರಿಂದ ಇವತ್ತು ಅವರೆಲ್ಲರ ಮೇಲೆ ಹತೋಟಿ ಇರಲೇಬೇಕು ಎನ್ನುವುದನ್ನು ತಾವು ಎಲ್ಲರೂ ಒಪ್ಪಿಕೊಳ್ಳುತ್ತೀರಿ. ಇನ್ನು ಕ್ಯಾಪಿಟೇಶನ್ ಫೀ ಬಗ್ಗೆ ತಾವು ಎಷ್ಟು ಕಾತುರತೆಯಿಂದ ಯೋಚನೆ ಮಾಡುತ್ತಿದ್ದೀರೋ ಅಷ್ಟೆ ಕಾತುರತೆಯಿಂದ ಅದನ್ನು ಯಾವ ರೀತಿ ತಪ್ಪಿಸಬೇಕು ಎನ್ನುವ ಬಗ್ಗೆ ಸರ್ಕಾರ ಯೋಚನೆ ಮಾಡುತ್ತಿದೆ. ಇದರಲ್ಲಿ ಏನಾಗಿದೆ ಎಂದರೆ ಅವರಿಗೆ ಒಂದು ಮಾನಸಿಕ ಭಾವನೆಯಿಂದ, ಒಂದು ಮನಸ್ಸಿನ ವೀಕ್‌ನೆಸ್‌ನಿಂದ, ಡಾಕ್ಟರ್ ಆಗಬೇಕಾದರೆ ಒಂದು ಲಕ್ಷ ರೂಪಾಯಿ ಖರ್ಚು ಮಾಡಿದ್ದೇನೆ ಅದನ್ನು ಹೇಗೆ ವಸೂಲು ಮಾಡಬೇಕು ಎನ್ನುವ ಮನೋಭಾವನೆಯಿಂದ ಡಾಕ್ಟರ್‌ಗಳು ಕೆಲಸ ಮಾಡುತ್ತಿದ್ದಾರೆ. ಇದನ್ನು ತಪ್ಪಿಸುವುದಕ್ಕೆ ಕಡಿಮೆ ಮಾಡುವುದಕ್ಕೆ ಏನು ಮಾಡಬೇಕು ಎನ್ನುವ ಬಗ್ಗೆ ಸರ್ಕಾರ ತೀವ್ರವಾಗಿ ಯೋಚನೆ ಮಾಡುತ್ತಿದೆ.

ಇನ್ನು ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ಎಷ್ಟೇ ಚೆನ್ನಾಗಿ ಕೆಲಸ ನಡೆಯುತ್ತಿದೆಯೆಂದು ಹೇಳಿದರೂ ಇನ್ನೂ ಅಲ್ಲಿ ಮಾಡಬೇಕಾದಂಥ ಕೆಲಸ ಇದೆ ಎಂದು ಹೇಳುವುದಕ್ಕೆ ತಯಾರಾಗಿದ್ದೇನೆ ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ ದಿನ ಒಂದಕ್ಕೆ ೧ ಸಾವಿರದ ೫೦೦ ವರೆಗೆ ಔಟ್ ಪೇಷೆಂಟ್ ಬರುತ್ತಾರೆ, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ೨,೫೦೦ ಜನದವರೆಗೆ ಔಟ್ ಪೇಷೆಂಟ್ ಬರುತ್ತಾರೆ. ಅಲ್ಲಿ ನೂಕು ನುಗ್ಗಲು ಇರುತ್ತದೆ. ಅದರ ಬಗ್ಗೆ ಯಾವ ರೀತಿಯ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಏಕಕಾಲದಲ್ಲಿ ಅದನ್ನು ನಾವು ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬುದು ತಮಗೂ ಗೊತ್ತಿದೆ. ಆದುದರಿಂದ ಇನ್ನು ಹೆಚ್ಚು ಈ ಮಸೂದೆಯ ಬಗ್ಗೆ ಹೇಳಬೇಕಾದ್ದು ಇಲ್ಲ ಇದಕ್ಕೆ ತಾವೆಲ್ಲರೂ ಏಕಮುಖವಾಗಿ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

MR. DEPUTY SPEAKER.—I shall first put Sri Shamanna's resolution disapproving the ordinance to the vote.

The question is :

"That the Karnataka Private Nursing Homes (Regulation) Ordinance, 1976 be disapproved as it is irrational and unhelpful to the public."

The motion was negatived.

MR. DEPUTY SPEAKER.—I shall now put the consideration motion to the vote of the House. The question is :

"That the Karnataka Private Nursing Homes (Regulation) Bill, 1976 be taken into consideration."

The motion was adopted

MR. DEPUTY SPEAKER.—Since there are no amendments, I shall put all the clauses to the vote of the House. The question is :

"That clauses 2 to 17 both inclusive, do stand part of the Bill."

The motion was adopted.

Clauses 2 to 17 both inclusive were added to the Bill.

MR. DEPUTY SPEAKER.—The question is:

"That clause 1, the Long Title, the Preamble and the Enacting Formula do stand part of the Bill."

The motion was adopted.

Clause 1, the Long Title the Preamble and the Enacting Formula were added to the Bill.

SRI H. M. CHANNABASAPPA.—Sir, I beg to move :

"That the Karnataka Private Nursing Homes (Regulation) Bill, 1976 be passed."

MR. DEPUTY SPEAKER.—The question is :

"That the Karnataka Private Nursing Homes (Regulation) Bill, 1976 be passed."

The motion was adopted and the Bill was passed.

MR. DEPUTY SPEAKER.—The House now stands adjourn to meet at 1 P.M. tomorrow.

The House adjourned at Six of the Clock to meet at One of the Clock on Thursday, the 11th November 1976.